ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಮಾರ್ಚ್ 2020
ಸಂಪುಟ 16, ಸಂಚಿಕೆ 03
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com





ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II, ಯಲಚಗುಪ್ಪೆಗೆ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಭೇಟಿ ಹಾಗೂ ಕಾರ್ಯಕಾರಿ ಸಮಿತಿ ಸಭೆ






ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಶಮಾನೋತ್ಸವ


ATTIDE
A Boutique Hotel by Swathi Group
3RD
ANNIVERSARY
We couldn't have done it without you!
THANK YOU
TO ALL OUR LOYAL GUESTS
Opp Jakkur Flying Club, International Airport Road, Bengaluru - 560 064
080 2217 7177 990 2000 200 www.attidehotels.com

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 16** **MARCH 2020** **ISSUE 03**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕೀಯ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಸ್ತ್ರೀ ಅಂದರೆ ಅಷ್ಟೇ ಸಾಕೆ...? | 5 |
| 5. | Women Today | 7 |
| 6. | ಬಂಟರೆಂಬ ಧೀಮಂತರು | 11 |
| 7. | ಸಾಮಾಜಿಕ ಜಾಲತಾಣಗಳಲ್ಲಿ ನರಕಾತ್ಮಕ ಚಿಂತನೆಗಳು | 14 |
| 8. | A Tribute To Sri Sri Vishwesha Theertha Swamiji, Sri Sri Shivakumara Swamiji & Sri Sri Balagangadharanatha Swamiji who left to their Heavenly Abode Recently | 15 |
| 9. | ಕರಾವಳಿಯ ಭೂತಾರಾಧನೆ ಹಾಗೂ ನಾಗಾರಾಧನೆಗಳು | 17 |
| 10. | ಮಾಜಿ ಸಚಿವ ಮುಂಡ್ರುದೆಗುತ್ತು ಕೆ. ಅಮರನಾಥ ಶೆಟ್ಟಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ | 19 |
| 11. | ದೇವರೊಲುಮೆ | 25 |
| 12. | ಮಹಿಳಾ ವಸತಿ ಗೃಹ ವಾರ್ಷಿಕೋತ್ಸವ | 26 |
| 13. | BSRNSV Graduation Day | 27 |
| 14. | BSRNSV ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಶಮಾನೋತ್ಸವ | 31 |
| 15. | Matrimonial Service Committee | 36 |

### ಮುಖಪುಟ

**ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II, ಯಲಚಗುಪ್ಪೆಗೆ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಭೇಟಿ ಹಾಗೂ ಕಾರ್ಯಕಾರಿ ಸಮಿತಿ ಸಭೆ**

**ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಶಮಾನೋತ್ಸವ**

# ಸಂಪಾದಕೀಯ



## ಮೊಬೈಲ್‌ನ ಬಳಕೆ (ಅತೀಯಾದ ಬಳಕೆ) ಎಷ್ಟು ಅಪಾಯಕಾರಿ?

ಈ ವಿಷಯವು ಸಾಮಾನ್ಯವಾಗಿದ್ದೆನಿಸದರೆ, ಮುಖ್ಯವಲ್ಲವೆನಿಸಿದರೆ, ನೀವು ಒಂದು ದೊಡ್ಡ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುದರಲ್ಲಿ ತಪ್ಪು ಮಾಡುತ್ತೀದ್ದೀರಿ ಎಂದೆ ಅರ್ಥ. ಹೌದು.... ಮೊಬೈಲ್ ಒಂದು ಹೊಸ ಸಾಧನವಾಗಿರುವುದರಿಂದ ಅದರ ದೀರ್ಘಕಾಲದ ದುಷ್ಪರಿಣಾಮದ ಬಗ್ಗೆ ತಿಳಿಯಲು ನಮಗೆ ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ. ಆದರೆ, ನಾವೂ ಅದನ್ನು ತಿಳಿದುಕೊಳ್ಳುವುದರೊಳಗೆ ತುಂಬಾ ಹಾನಿಮಾಡಿಕೊಳ್ಳುವುದು ಬೇಡ.

ನಾವು ಬದಲಾಗುತ್ತಿರುವ ಜಾಗತಿಕ ಚಿತ್ರಣವನ್ನು ನೋಡುತ್ತಿದ್ದೇವೆ. ಕಳೆದ 20 ವರ್ಷಗಳಲ್ಲಿ ಅಂತೂ ಜಗತ್ತು ಅತೀ ಹೆಚ್ಚು ವೇಗದಲ್ಲಿ ಬದಲಾಗಿದೆ. ತಂತ್ರಜ್ಞಾನ ಅತೀ ಹೆಚ್ಚು ವೇಗದಲ್ಲಿ ಬದಲಾವಣೆ ತಂದಿರುವ ಕಾಲವಿದು. ತಂತ್ರಜ್ಞಾನವು ಅನೇಕ ಅವಶ್ಯಕ ಉತ್ಪನ್ನಗಳನ್ನು ನಮಗೆ ನೀಡಿದೆ. ಆದರೆ ಅವುಗಳ ಬಳಕೆಯನ್ನು ನಮ್ಮ ಅವಶ್ಯಕತೆಗಿಂತ ಹೆಚ್ಚು ಮಾಡಿ ನಾವಿಂದು ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿದೆ. ಅವುಗಳಲ್ಲಿ ಈ ಮೊಬೈಲ್ ಫೋನ್ ಅತೀ ಹೆಚ್ಚು ಉಪಕಾರಿ ಹಾಗೂ ಅಪಾಯಕಾರಿ ಸಾಧನವಾಗಿದೆ.

ನಮ್ಮ ಮೊಬೈಲ್ ಬಳಕೆಯ (ದುರ್ಬಳಕೆಯ) ಬಗ್ಗೆ ಈ ಅಂಕಣದಲ್ಲಿ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದೇನೆ.

ಇಂದು ಪ್ರತೀ ಮನೆಯಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ನಾವು ಕಾಣುತ್ತೇವೆ. ಟಿ.ವಿ., ರೇಡಿಯೋ, ಕಂಪ್ಯೂಟರ್ ಈ ಎಲ್ಲದವುಗಳ ಸೇವೆಯನ್ನು ಮೊಬೈಲ್ ಒಂದೇ ಒದಗಿಸುತ್ತಿದೆ, ಹೀಗಾಗಿ ಅದು ಜ್ಞಾನದ ಭಂಡಾರದ ಜೊತೆಗೆ ಮನರಂಜನೆಯ ಸಾಧನವೂ ಆಗಿದೆ. ಆದರೆ ಅದರ ಬಳಕೆ ಮಾತ್ರ ಅತೀಯಾಗಿರುವುದರಿಂದ ಅನೇಕ ಆರೋಗ್ಯ ತೊಂದರೆಗಳಿಗೆ ಕಾರಣವಾಗುತ್ತಿದೆ. ವಿಶೇಷವಾಗಿ ಚಿಕ್ಕ ಮಕ್ಕಳ ಮಾನಸಿಕ ಹಾಗೂ ಶಾರೀರಿಕ ಆರೋಗ್ಯದ ಮೇಲೇ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿದೆ.

ಮೊಬೈಲ್ ಸಿಗ್ನಲ್‌ಗಳು ಮಾನವನ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಹಾಳುಮಾಡುತ್ತವೆ. ಅದರಿಂದ ಬರುವ ಬೆಳಕು ಕೂಡ ಕಣ್ಣುಗಳಿಗೆ ತುಂಬಾ ಅಪಾಯಕಾರಿ. ಇಂದು ಮಕ್ಕಳು ಹೊರಗಡೆ ಹೋಗಿ ಆಡುವುದನ್ನು ಮರೆತಂತೇ ಆಗಿದೆ. ಮೊದಮೊದಲಿಗೆ ಮನರಂಜನೆಗಾಗಿ ಬಳಸುವ ಈ ಸಾಧನದ ಬಳಕೆ ನೋಡನೋಡುತ್ತ ಚಟವಾಗಿ ಮಾರ್ಪಾಡಾಗುತ್ತಿದೆ. ತಂದೆ ತಾಯಿಯರು ಮಕ್ಕಳಿಂದ ಅದನ್ನು ಕಸಿದುಕೊಂಡರೆ ಮಕ್ಕಳು ಅತ್ತು ಊಟ ಬಿಟ್ಟು ಮತ್ತೆ ಅದನ್ನು ಕೊಟ್ಟ ನಂತರವೇ ಸಮಾಧಾನವಾಗುವ ಪರಿಸ್ಥಿತಿ ಎದುರಾಗಿದೆ.

ಈಗಾಗಲೇ ಅನೇಕ ಮಕ್ಕಳ ಕೇಂದ್ರ ನರವ್ಯೂಹ (ಸೆಂಟ್ರಲ್ ನರ್ವಸ್ ಸಿಸ್ಟಮ್)ಗೆ ಹಾನಿಯಾಗಿರುವುದನ್ನು ನಾವು ನೋಡಿದ್ದೇವೆ. ಅಂತಹ ಮಕ್ಕಳ ಜೀವನ ಮತ್ತೇ ಸಾಮಾನ್ಯವಾಗುವುದು ಕಷ್ಟವೇ. ಆದ್ದರಿಂದ ಮಕ್ಕಳು ಹಠ ಮಾಡುತ್ತಾರೆನ್ನುವ ಕಾರಣಕ್ಕೆ ಅವರಿಗೆ ಮೊಬೈಲ್ ಕೊಟ್ಟು ತಾತ್ಕಾಲಿಕವಾಗಿ ಶಾಂತವಾಗಿಸುವುದು ಬಹಳ ಅಪಾಯಕಾರಿ ಅಭ್ಯಾಸ. ಇದು ಒಂದು ಚಿಕ್ಕ ವಿಷಯವೆನಿಸಿದರೂ ಅದರ ದೀರ್ಘಕಾಲದ ಪರಿಣಾಮ ನಾವು ಊಹಿಸಲಾಗದಷ್ಟು ಭಯಂಕರವಾಗಲಿದೆ.

ಹೆಚ್ಚಾದರೆ ಅಮೃತವೂ ವಿಷವಾಗುತ್ತದೆ ಎನ್ನುವುದನ್ನೂ ನಾವೂ ಚಿಕ್ಕವರಿದ್ದಾಗಿನಿಂದಲೂ ಕೇಳಿಕೊಂಡು ಬಂದಿದೇವೆ. ಮೊಬೈಲ್ ವಿಷಯದಲ್ಲೂ ಅಷ್ಟೇ, ಈ ಮಾತು ನೂರಕ್ಕೆ ನೂರರಷ್ಟು ಅನ್ವಯವಾಗುತ್ತದೆ.

ನಮ್ಮ ಮಕ್ಕಳ ಉತ್ತಮ, ಆರೋಗ್ಯವಂತ ಭವಿಷ್ಯಕ್ಕಾಗಿ ಇಂದು ನಾವೂ ಕೆಲವು ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಮನರಂಜನೆಗೋಸ್ಕರವೇ ಮಕ್ಕಳು ಮೊಬೈಲ್ ಅನ್ನು ಬಳಸುವುದು, ಆದ್ದರಿಂದ ಮಕ್ಕಳಿಗೆ ಅದರ ಪರ್ಯಾಯವಾಗಿ ಬೇರೆಬೇರೆ ವಿಷಯಗಳಲ್ಲಿ ತೊಡಗಿಸಿ. ಅವರಿಗೆ ಮೈದಾನದಲ್ಲಿ ಆಡುವಂತೆ ಪ್ರೇರೇಪಿಸಿ, ಪುಸ್ತಕಗಳನ್ನು ಓದುವಂತೆ, ಚಿತ್ರಕಲೆಯನ್ನು ಕಲಿಯುವಂತೆ, ಸಂಗೀತ, ಕ್ರೀಡೆ, ನೃತ್ಯ ಹೀಗೆ ಹಲವಾರು ಚಟುವಟಿಕೆಗಳಲ್ಲಿ ತೊಡಗುವಂತೆ ನೋಡಿಕೊಳ್ಳಿ. ಅವರಿಗೆ ಇತರ ಮಕ್ಕಳ ಜೊತೆಗೆ ಬೆರೆಯುವಂತೆ ಮಾಡಿ.

ಎಲ್ಲದಕ್ಕಿಂತ ಮುಖ್ಯವಾಗಿ ನಾವೂ ಮೊದಲು ಮೊಬೈಲ್‌ನ ಅತೀಯಾದ ಬಳಕೆಯಿಂದ ದೂರವಿರೋಣ, ಯಾಕೆಂದರೆ ಮಕ್ಕಳೂ ಹೇಳುವುದನ್ನು ಕೇಳುವುದಕ್ಕಿಂತ, ನಾವು ಮಾಡುವುದನ್ನು ಅನುಕರಣೆ ಮಾಡುತ್ತಾರೆ. ನಾವೇ ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಂಡರೆ, ಮಕ್ಕಳೂ ಅದನ್ನು ರೂಢಿಸಿಕೊಳ್ಳುತ್ತಾರೆ.

ಬನ್ನಿ, ನಮ್ಮ ಮಕ್ಕಳ ಭವಿಷ್ಯವನ್ನು ಸದೃಢಗೊಳಿಸಲು ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳೋಣ. ಎಲ್ಲರೂ ಆರೋಗ್ಯವಾಗಿರೋಣ, ಆನಂದದಿಂದಿರೋಣ.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯ ಬಾಂಧವರೇ,

ಉದ್ಯೋಗ, ವ್ಯವಹಾರ ನಿಮಿತ್ತ ತಮ್ಮ ಹುಟ್ಟೂರನ್ನು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿರುವ ಬಂಟ ಬಾಂಧವರು ತಮ್ಮ ಮಕ್ಕಳಿಗೆ ಸೂಕ್ತ ವರ/ ವಧುವನ್ನು ಹುಡುಕುವುದು ದೊಡ್ಡ ಸವಾಲಾಗಿದೆ. ಈ ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಸಂಘದ ಹಿರಿಯರು ವಿವಾಹ ವೇದಿಕೆ ಸಮಿತಿಯನ್ನು ಪ್ರಾರಂಭಿಸಿ ತನ್ಮೂಲಕ ವಿವಾಹಾಕಾಂಕ್ಷಿಗಳು ಮತ್ತು ಅವರ ಪೋಷಕರಿಗೆ ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡುತ್ತಿದೆ. ಮಹಾನಗರಗಳಲ್ಲಿ ನೆಲೆಸಿರುವ ನಮ್ಮ ಯುವಕ-ಯುವತಿಯರ ಬದಲಾದ ಜೀವನ ಶೈಲಿಗೆ ಅನುಗುಣವಾಗಿ ಇಂತಹ ವೇದಿಕೆಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಘದ ವಿವಾಹ ವೇದಿಕೆಯ ವತಿಯಿಂದ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ತಾರಾಮಣಿ ಹೆಗ್ಡೆ, ಸಂಚಾಲಕ ಶ್ರೀ ಎಸ್. ಸುಧಾಕರ ಶೆಟ್ಟಿ ಮತ್ತು ತಂಡವು ದಿನಾಂಕ 08.03.2020 ರಂದು ಆಯೋಜಿಸಿದ್ದ 'ಅನ್ವೇಷಣಾ 2020' ವಧೂ-ವರರ ಸಮಾವೇಶದ ಪ್ರಯೋಜನವನ್ನು ತಾವೆಲ್ಲರೂ ಪಡೆದಿರುತ್ತೀರಿ ಎಂದು ಭಾವಿಸುತ್ತೇನೆ.

ನಮ್ಮ ಬಂಟ ಸಮುದಾಯವು ಮಹಿಳಾ ಪ್ರಧಾನವಾಗಿದ್ದು, ಮಹಿಳೆಯರಿಗೆ ವಿಶೇಷ ಸ್ಥಾನ-ಮಾನ ನೀಡಿದೆ. ನಮ್ಮ ಸಂಘದ ಮಹಿಳಾ ವಿಭಾಗದ ಮೂಲಕ ಮಹಿಳೆಯರಿಗೆ ಅನುಕೂಲವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇದೀಗ ನಮ್ಮ ಸಂಘದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈ ಮತ್ತು ತಂಡದ ಆಯೋಜನೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ದಿನಾಂಕ 14.03.2020 ರಂದು ಉಚಿತ ವೈದ್ಯಕೀಯ ಶಿಬಿರ, ಬಂಟ ಹಾಗೂ ಬಂಟೇತರ ಸಮುದಾಯದ ಅರ್ಹ ಮಹಿಳೆಯರಿಗೆ ಅಗತ್ಯ ವಸ್ತುಗಳ ವಿತರಣೆ, ಸಾಂಸ್ಕೃತಿಕ ಸ್ಪರ್ಧೆ, ಮಹಿಳೆಯರ ಸ್ವಾವಲಂಬನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ವಿವಿಧ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೀರಿ ಎಂದು ಆಶಿಸುತ್ತೇನೆ.

ನಾವು ಆಚರಿಸುವ ಎಲ್ಲಾ ಹಬ್ಬಗಳು ನಮ್ಮೆಲ್ಲರ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿವೆ. ಬಂಟರು ದೇಶ-ವಿದೇಶದಾದ್ಯಂತ ನೆಲೆಸಿದ್ದರೂ ಕೂಡ ನಮ್ಮ ಹಬ್ಬ-ಹರಿದಿನದ ಆಚರಣೆಗಳನ್ನು ತಾವು ನೆಲೆನಿಂತಿರುವ ಸ್ಥಳದಲ್ಲೇ ಒಟ್ಟಾಗಿ ಆಚರಿಸುತ್ತಿರುವುದು ಸಂತಸದ ವಿಷಯ. ಬೆಂಗಳೂರು ಬಂಟರ ಸಂಘ ತನ್ನ ಅಸ್ತಿತ್ವದ ಆರಂಭಿಕ ದಿನಗಳಿಂದಲೂ ನಮ್ಮ ಸಂಸ್ಕೃತಿ ಹಾಗೂ ಆಚರಣೆಗಳಿಗೆ ಪ್ರಾಮುಖ್ಯತೆ ನೀಡುತ್ತಲೇ ಬಂದಿದೆ. ದಿನಾಂಕ 14.04.2020 ರಂದು ನಮ್ಮ ಸಂಘದ ಆವರಣದಲ್ಲಿ ಸೌರಮಾನ ಯುಗಾದಿ (ಬಿಸು) ಹಬ್ಬವನ್ನು ಬಹಳ ವಿಶೇಷ ಹಾಗೂ ಸಂಭ್ರಮದಿಂದ ಆಚರಿಸಲು ನಾವೆಲ್ಲರೂ ಅಣಿಯಾಗಿದ್ದೇವೆ. ಇದೇ ಸಂದರ್ಭದಲ್ಲಿ ನೂತನ ಪುರುಷರ ಹಾಸ್ಟೆಲ್‌ನ ಉದ್ಘಾಟನೆ ನೆರವೇರಿಸಬೇಕೆಂಬ ಆಶಯ ನಮ್ಮದಾಗಿದೆ. ತಾವೆಲ್ಲರೂ ಎಡೆಬಿಡದ ಕೆಲಸ-ಕಾರ್ಯಗಳಿಗೆ ಅಲ್ಪ ವಿರಾಮ ನೀಡಿ ಬಿಸು ಸಡಗರದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಯೋಜನೆ ತ್ವರಿತಗತಿಯಲ್ಲಿ ಸಾಗುತ್ತಿದ್ದು, ಪ್ರಥಮ ಹಂತದ ಕಾಮಗಾರಿ ಜೂನ್ ತಿಂಗಳಿನಲ್ಲಿ ಮುಗಿಯುವ ನಿರೀಕ್ಷೆಯಿದೆ. ನೂತನ ವಿದ್ಯಾಸಂಸ್ಥೆಗೆ ಪ್ರತ್ಯೇಕ ಆಡಳಿತ ಮಂಡಳಿ ರಚಿಸುವ ನಿಟ್ಟಿನಲ್ಲಿ ಅಂತಿಮ ರೂಪುರೇಷೆಗಳೊಂದಿಗೆ ಸರ್ವಸದಸ್ಯರ ಅನುಮತಿಗಾಗಿ ವಿಶೇಷ ಮಹಾಸಭೆ ಕರೆದು ತಮ್ಮೆಲ್ಲರ ಸಲಹೆ-ಸೂಚನೆ ಮತ್ತು ಮಾರ್ಗದರ್ಶನದಂತೆ ಮುಂದುವರಿಯಲಾಗುವುದು.

ಬಂಟ ಸಮುದಾಯಕ್ಕೆ ಹಾಗೂ ಸಮಾಜಕ್ಕೆ ಅತ್ಯುನ್ನತವಾದ ಶೈಕ್ಷಣಿಕ ಸೇವೆಯನ್ನು ನೀಡುವ ಸಲುವಾಗಿ 'ಬಂಟ್ಸ್ ಎಜುಕೇಶನ್ ಸೊಸೈಟಿ' ಸ್ಥಾಪಿಸುವ ಪರಿಕಲ್ಪನೆಗೆ ತಮ್ಮೆಲ್ಲರ ಸಹಕಾರ ಕೋರುತ್ತೇನೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಓಂ ಶ್ರೀ ಗುರುಭ್ಯೋ ನಮಃ

ಯಾವಾಗ ಬೇರೆ ಜಗತ್ತಿನಲ್ಲಿ ಜನರಿಗೆ ಓದುವ ಬರೆಯುವ ಜ್ಞಾನ ಇರಲಿಲ್ಲ ಆಗ ಹಿಂದೂಗಳು ಭಾರತದಲ್ಲಿ ವೇದಗಳನ್ನು ಬರೆದರು. ಯಾವಾಗ ಬೇರೆ ಜಗತ್ತಿನಲ್ಲಿ ಶಿಕ್ಷಣದ ಅರಿವಿರಲಿಲ್ಲ ಆಗ ಭಾರತದಲ್ಲಿ ಗುರುಕುಲ ಶಿಕ್ಷಣವಿತ್ತು.

ವಿದ್ಯೆಯೇ ಮನುಕುಲದ ಆಸ್ತಿ. ಬಂಟರ ಸಂಘ ಆರ್.ಎನ್.ಎಸ್ ವಿದ್ಯಾಸಂಸ್ಥೆ –II ಇದು ಯಲಚಗುಪ್ಪೆಯಲ್ಲಿ ಇನ್ನೇನು ಕೆಲವೇ ತಿಂಗಳುಗಳಲ್ಲಿ ಕಾರ್ಯಾರಂಭಗೊಳ್ಳಲಿದೆ. ಬಹುತೇಕ ಕಟ್ಟಡ ಕಾರ್ಯ ಪೂರ್ಣಗೊಂಡಿದ್ದು ಒಳಗಿನ ವಿನ್ಯಾಸ ರೂಪುಗೊಳ್ಳಲಿದೆ.

ಮುಂದಿನ ಶೈಕ್ಷಣಿಕ ವರ್ಷ ಅಂದರೆ ಜೂನ್‌ನಿಂದ ಶಾಲೆಯನ್ನು ಪ್ರಾರಂಭಿಸುವ ಬಗ್ಗೆ ತಯಾರಿ ನಡೆಯುತ್ತಿದೆ. ಈಗಾಗಲೇ ಯಲಚಗುಪ್ಪೆಯ ಸುತ್ತಮುತ್ತಲಿನ ಪ್ರದೇಶದ ಜನರಿಗೆ ಶಾಲೆಯನ್ನು ಪ್ರಾರಂಭಿಸುವ ಬಗ್ಗೆ ಪ್ರಚಾರ ನಡೆಯುತ್ತಿದೆ. ಶಾಲೆಯನ್ನು ಕಾರ್ಯಾರಂಭ ಮಾಡಲು ಹಲವಾರು ಸವಾಲುಗಳು ನಮ್ಮ ಮುಂದಿವೆ.

ಹಲವು ದಾನಿಗಳನ್ನು ಹುಡುಕಿ ಆರ್ಥಿಕ ಸಂಪನ್ಮೂಲ ಕ್ರೋಢಿಕರಿಸಬೇಕಾಗಿದೆ. ಈಗಾಗಲೇ ಅಧ್ಯಕ್ಷರ ನೇತೃತ್ವದಲ್ಲಿ ಕಳೆದ ವಾರ ಮುಂಬೈಗೆ ತೆರಳಿ ಹಲವು ಮಹಾ ದಾನಿಗಳನ್ನು ಸಂಪರ್ಕಿಸಿ, ಭರವಸೆಯನ್ನು ಪಡೆದು ಬಂದಿದ್ದೇವೆ. ಹಾಗೆಯೇ ಬೆಂಗಳೂರಿನಲ್ಲಿ ದಾನಿಗಳೆಲ್ಲರನ್ನು ಒಂದೆಡೆ ಸೇರಿಸಿ, ವಿದ್ಯೆಗೆ ಕೈಜೋಡಿಸುವ ಬಗ್ಗೆ ಮನವಿ ಮಾಡಲಿದ್ದೇವೆ. ಸಂಘಕ್ಕೆ ಆರ್ಥಿಕವಾಗಿ ಹೊರೆಯಾಗದ ರೀತಿಯಲ್ಲಿ ಹೆಚ್ಚೆಚ್ಚು ಹಣ ಸಂಗ್ರಹ ಮಾಡುವುದು ನಮ್ಮ ತಂಡದ ಉದ್ದೇಶವಾಗಿದೆ.

ಇದಕ್ಕಾಗಿ ಫೆಬ್ರವರಿ ತಿಂಗಳ ಕಾರ್ಯಕಾರಿ ಸಮಿತಿ ಸಭೆಯನ್ನು ಯಲಚಗುಪ್ಪೆಯಲ್ಲಿ ಮಾಡಿ ಹಲವಾರು ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ತುಂಬಾ ಉತ್ಸುಕತೆ ತೋರಿದ್ದು, ಸರ್ವಾಂಗೀಣ ಅಭಿವೃದ್ಧಿಗೆ ಸಾಕ್ಷಿಯಾಗಿದೆ.

ಈ ಯೋಜನೆ ನಿಯೋಜಿತ ಸಮಯದಲ್ಲಿ ಬರಲು ಹಗಲಿರುಳು ಶ್ರಮಿಸುತ್ತಿರುವ ಶ್ರೀ ಅಶೋಕ್ ಶೆಟ್ಟಿ ಮತ್ತು ಶ್ರೀ ರಮಿತ್ ಬಿ. ಶೆಟ್ಟಿಯವರ ಕೊಡುಗೆ ಅಪಾರವಾದದ್ದು. ಅವರಿಗೆ ನಮ್ಮ ಸಂಪೂರ್ಣ ಕಾರ್ಯಕಾರಿ ಸಮಿತಿಯ ಪರವಾಗಿ ಅಭಿನಂದನೆಗಳು.

ಬಂಟರ ಸಂಘ ಬಿ.ಆರ್.ಎಸ್ ಮಹಿಳಾ ವಸತಿ ಗೃಹದ ದಿನಾಚರಣೆಯನ್ನು ಮಹಿಳಾ ವಿಭಾಗದವರು ಅಚ್ಚು ಕಟ್ಟಾಗಿ ಆಯೋಜಿಸಿದ್ದರು. ಹಾಸ್ಟೆಲ್‌ನ ಎಲ್ಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ಬಹಳ ಸುಂದರವಾಗಿ ನಡೆಸಿಕೊಟ್ಟರು. ಅದಕ್ಕೆ ಶ್ರಮಿಸಿದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈ, ವಾರ್ಡನ್ ಶ್ರೀಮತಿ ಸುಜಾತ ಎಸ್. ಶೆಟ್ಟಿಯವರಿಗೆ ಧನ್ಯವಾದಗಳು.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಸ್ತ್ರೀ ಅಂದರೆ ಅಷ್ಟೇ ಸಾಕೆ...?



ಅನುಷಾ ಶೆಟ್ಟಿ

**"ಹೆಣ್ಣಿಂದಲೇ ಇಹವು ಹೆಣ್ಣಿಂದಲೇ ಪರವು**

**ಹೆಣ್ಣಿಂದಲೇ ಸಕಲ ಸಂಪದವು ಹೆಣ್ಣೊಲ್ಲ ದಣ್ಣಗಳು ಯಾರು ಸರ್ವಜ್ಞ..!!"**

ಒಂದು ಜೀವವನ್ನು ಸೃಷ್ಟಿಸುವ ಶಕ್ತಿ ಹೆಣ್ಣಿಗೆ ಇದೆ ಎಂದರೆ ಖಂಡಿತವಾಗಿ ಆಕೆಯಲ್ಲಿ ಅತ್ಯದ್ಭುತವಾದ ಶಕ್ತಿ ಅಡಗಿದೆ ಎಂದರ್ಥ. ಆಕೆಯ ಶರೀರ ಧರ್ಮಕ್ಕೆ ಸಂಬಂಧಿಸಿದಂತೆ ಆಕೆಗೆ ಕೆಲವೊಂದು ದೌರ್ಬಲ್ಯ, ನಿರ್ಬಂಧಗಳಿರಬಹುದು. ಆದರೆ ಮಾನಸಿಕವಾಗಿ, ಬೌದ್ಧಿಕವಾಗಿ ಆಕೆ ಪ್ರಬಲಳು, ಪ್ರಬುದ್ಧಳು. ಭಕ್ತಿ, ಶಕ್ತಿ, ಶೌರ್ಯ, ಸಾಹಸ, ತ್ಯಾಗ, ಸಹನೆ, ಜ್ಞಾನ ಹೀಗೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತುಂಗಕ್ಕೆ ಏರಿದವಳು. ಹೆಣ್ಣು ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ, ತಾಳ್ಮೆಗಳಂತಹ ವಿಶಿಷ್ಟ ಶಕ್ತಿಗಳ ಸಂಗಮ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅವಳದೇ ಆದ ಗೌರವ, ಸ್ಥಾನಮಾನಗಳಿವೆ. ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿ ವರ್ಷ ಮಾರ್ಚ್ 8ನ್ನು ಅಂತರಾಷ್ಟ್ರೀಯ ಮಹಿಳಾ ದಿನವಾಗಿ ಆಚರಿಸಲಾಗುತ್ತಿದೆ. ಹೆಣ್ಣು ಅಬಲೆ ಮತ್ತು ಅಸಮರ್ಥಳಲ್ಲ, ಹೆತ್ತವರಿಗೆ ಹೊರೆಯಲ್ಲ, ಕುಟುಂಬದ ಸರ್ವಾಂಗೀಣ ಅಭಿವೃದ್ಧಿಗಾಗಿ ಯೋಚಿಸುವ ಹೆಣ್ಣು ಸ್ವಾಭಿಮಾನಿ. ಇಂತಹ ಹೆಣ್ಣು ಮಕ್ಕಳ ಪ್ರಗತಿಗೆ ಕೆಲವು ಮೂಢ ವಿಚಾರಧಾರೆಗಳು ತೊಡಕಾಗಬಾರದು. ಆಕೆ ವಿದ್ಯಾವಂತಳಾಗಿ ಸಮಾಜಕ್ಕೆ ಮಾದರಿಯಾಗಿ ಬದುಕಬೇಕು.

ಮಹಿಳೆ ನಾಲ್ಕು ಗೋಡೆಗಳ ನಡುವೆ ಕಾಲಕಳೆಯುವ ಕಾಲವೀಗ ಕಣ್ಮರೆಯಾಗಿ, ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಷ್ಟೇ ಧೀಮಂತಿಕೆಯಿಂದ ಬದುಕಲು ಸಾಧ್ಯವಿದೆಯೆಂದು ಹಲವಾರು ರೀತಿಯ ಸಾಧನೆಗಳನ್ನು ಮಾಡುವುದರ ಮೂಲಕ ತೋರಿಸಿ ಕೊಟ್ಟಿದ್ದಾಳೆ. ಎಲ್ಲಾ ಕ್ಷೇತ್ರದಲ್ಲೂ ಮುನ್ನಡೆಯುತ್ತಾ ಜಗತ್ತಿನ ದೃಷ್ಟಿಯನ್ನು ತನ್ನೆಡೆಗೆ ಸೆಳೆದಿದ್ದಾಳೆ. ಕಲೆ, ಸಾಹಿತ್ಯ, ವೈಜ್ಞಾನಿಕ, ಸಾಮಾಜಿಕ, ರಾಜಕೀಯ, ಉದ್ಯಮ, ಕ್ರೀಡೆ, ಸಾಹಸ ಪ್ರವೃತ್ತಿಯಂತಹ ಸಾಧನೆಯಲ್ಲಿ ತೊಡಗಿ ವಿಶ್ವದ ಗೌರವಕ್ಕೆ ಪಾತ್ರಳಾಗಿದ್ದಾಳೆ.

ಬಾಹ್ಯಾಕಾಶಕ್ಕೆ ಹಾರಿದ ಭಾರತೀಯ ಪ್ರಥಮ ಮಹಿಳೆ "ಕಲ್ಪನಾ ಚಾವ್ಲಾ". ಬಾಹ್ಯಾಕಾಶ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿ ಅತ್ಯಂತ ಸಣ್ಣವಯಸ್ಸಿನಲ್ಲಿ ಅಂತರಿಕ್ಷದಲ್ಲೇ ಲೀನವಾದ ದಿಟ್ಟ ಮಹಿಳೆ.

ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಸೇರಿದ ಪ್ರಥಮ ಮಹಿಳೆ ಕಿರಣ್ ಬೇಡಿ. ತನ್ನ ವೃತ್ತಿನಿಷ್ಠೆ, ಧೈರ್ಯ, ಸಾಹಸ, ಸಾಮರ್ಥ್ಯಗಳಿಂದ ಅನೇಕ ಹುದ್ದೆಗಳನ್ನು, ಸವಾಲುಗಳನ್ನು ಎದುರಿಸಿ ಯಾವ ಪುರುಷರಿಗೂ ಕಮ್ಮಿಯಿಲ್ಲ ಎಂದು ಸಾಬೀತುಪಡಿಸಿದಾಕೆ.

ಮದರ್ ತೆರೆಸಾ, ಸುನಿತಾ ವಿಲಿಯಮ್ಸ್, ಮೇರಿ ಕೋಮ್, ಬಚೇಂದ್ರಿ ಪಾಲ್, ಸುಧಾ ಮೂರ್ತಿ, ಸರೋಜಿನಿ ನಾಯ್ಡು ಹೀಗೆ ಅನೇಕ ಮಹಿಳೆಯರು ಎಲ್ಲಾ ಸವಾಲುಗಳನ್ನು ದಾಟಿ ಸಮಾಜಕ್ಕೆ ಮಾದರಿಯಾದವರು.

ಇತಿಹಾಸದಲ್ಲಿ ನೋಡುವುದಾದರೆ, ಬ್ರಿಟಿಷರ ನಿದ್ದೆ ಕೆಡಿಸಿದ ಭಾರತದ ಸಿಂಹಿಣಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ. ಗಂಡು ಮೆಟ್ಟಿದ ನಾಡಿನ ವೀರ ಹೆಣ್ಣು ನಮ್ಮ ಕಿತ್ತೂರ ರಾಣಿ ಚೆನ್ನಮ್ಮ, ಬೆಳವಾಡಿ ಮಲ್ಲಮ್ಮ, ರಾಣಿ ಅಬ್ಬಕ್ಕ ಮುಂತಾದ ವೀರವನಿತೆಯರ ತ್ಯಾಗ, ಪರಾಕ್ರಮ ಎಂತವರಲ್ಲೂ ಕೆಚ್ಚು ಹೆಚ್ಚಿಸುವಂತದ್ದು.

ಇಂದು 21 ನೇ ಶತಮಾನದಲ್ಲಿ ದೇಶ ಅಭಿವೃದ್ಧಿ ಹೊಂದುತ್ತಿರುವುದರ ಜೊತೆ ಜೊತೆಗೆ ಅದಕ್ಕಿಂತ ತೀವ್ರಗತಿಯಲ್ಲಿ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ಶೋಷಣೆಗಳು, ಭ್ರೂಣ ಹತ್ಯೆ, ಅನಕ್ಷರತೆ, ಕಿರುಕುಳ, ತಾರತಮ್ಯ, ಅವಮಾನ ಲೆಕ್ಕಕ್ಕೆ ಸಿಗದಷ್ಟು

ಜರಗುತ್ತಿರುವುದು ಅಷ್ಟೇ ಸತ್ಯ. ಇಂದು ಆಕೆ ಸ್ವತಂತ್ರಳಾಗಿ ಎಷ್ಟೇ ಮಹತ್ತರ ಸಾಧನೆಗಳನ್ನು ಮಾಡಿ ತಾನು ಅಬಲೆಯಲ್ಲ ಸಬಲೆ ಎಂದು ಸಾಬೀತು ಪಡಿಸಿಯೂ ಆಕೆ ತಾನು ನಿರ್ಭಯಳು ಎನ್ನಲಾಗದಂತಹ ವ್ಯವಸ್ಥೆಯಲ್ಲಿ ನಾವಿದ್ದೇವೆ.

ಪ್ರತಿದಿನ ಮನೆಯಿಂದ ಹೊರಡುವಾಗ ತನ್ನ ತಂದೆ, ತಾಯಿ, ಅಣ್ಣ, ತಮ್ಮ, ತಂಗಿಯರಿಗೆ ಪ್ರೀತಿಯಿಂದ ಬೈ ಹೇಳಿ ಹೋದ ಮಗಳು ತನ್ನ ಕೆಲಸ ಮುಗಿಸಿ ಮನೆಗೆ ವಾಪಾಸ್ಸಾಗುತ್ತಾಳೋ ಇಲ್ಲವೋ ಎಂಬ ಭಯದಲ್ಲಿರುವ ಪೋಷಕರು, ಪಕ್ಕದ ಮನೆಗೆ ಆಡಲು ಹೋದ ಪುಟ್ಟ ಹೆಣ್ಣು ಮಗು ಬರುವವರೆಗೆ ತಲ್ಲಣಿಸುವ ತಾಯಿ ಜೀವ, ಶಾಲೆಗೆಂದು ಹೋದ ಮಗಳು ಕ್ಷೇಮವಾಗಿ ಹಿಂತಿರುಗುವವರೆಗೆ ಕಾಯುವ ಮನೆಮಂದಿಯ ಆತಂಕ, ಮನೆಯ ಯಾವುದೇ ಹೆಣ್ಣು ಮರಳಿ ಮನೆಗೆ ಬರುವ ತನಕ ಜೀವ ಕೈಯಲ್ಲಿ ಹಿಡಿದು ಕಾಯುವಂತಹ ಪರಿಸ್ಥಿತಿ ಹಳ್ಳಿ, ನಗರಗಳೆನ್ನದೇ ಪ್ರತಿ ಮನೆಯಲ್ಲೂ ಕಾಣುತ್ತಿದೆಯೆಂದರೆ ಇದಕ್ಕೆಲ್ಲಾ ಯಾರು ಕಾರಣ? ನಮ್ಮ ವ್ಯವಸ್ಥೆ? ಪುರುಷರು? ಹೆತ್ತವರು? ಉಡುಗೆ ತೊಡುಗೆ? ದುಶ್ಚಟಗಳು? ಸಮಾಜ? ಆಧುನೀಕತೆ? ಯಾವುದು? ಇವ್ಯಾವುದು ಅಲ್ಲ... ಎಲ್ಲಕ್ಕೂ ಮೂಲಕಾರಣ "ವಿಕೃತಿ ಮೆರೆಯುತ್ತಿರುವ ಮನುಷ್ಯನ ಕ್ರೂರ ಮನಸ್ಸು". ಸಮಾಜ ಬದಲಾದರೆ ಸಾಲದು, ಜನರ ಮನಸ್ಥಿತಿ ಬದಲಾಗಬೇಕು. ಹೆಣ್ಣು ಮಗುವಿಗೆ ಬಾಲ್ಯದಿಂದಲೇ ತನ್ನ ಅಧಿಕಾರ, ಹಕ್ಕು, ಸುರಕ್ಷತೆಗಳ ಅರಿವು ಮೂಡಿಸುವ ಜವಾಬ್ದಾರಿ ಪೋಷಕರದ್ದು.

ಮಹಿಳೆಯರ ಸಮಾನತೆ, ಸಬಲತೆ, ಸ್ಥಾನ-ಮಾನ, ಮಹತ್ವ ಕೇವಲ ಭಾಷಣ, ಬರಹಗಳಿಗಷ್ಟೇ ಸೀಮಿತವಾದಂತಿದೆ. ಸಮಾಜ ಇಷ್ಟೊಂದು ಅಭಿವೃದ್ಧಿಯಾದರೂ, ದಿನನಿತ್ಯ ನಾವು ಹೆಣ್ಣು ಭ್ರೂಣ ಹತ್ಯೆ, ಶೋಷಣೆಗಳಂತಹ ಹೆಣ್ಣು ಮಗುವಿನ ಬಗೆಗಿನ ದ್ವೇಷ, ಅಸಹನೆಯ ಕೆಟ್ಟ ಸುದ್ದಿಗಳನ್ನು ಕೇಳುತ್ತಿರುವುದು ವಿಷಾದನೀಯ. ಹೊತ್ತವಳು ಹೆಣ್ಣು, ಹೆತ್ತವಳು ಹೆಣ್ಣು, ಒಡಹುಟ್ಟಿದವಳು ಹೆಣ್ಣು, ಮಡದಿ ಹೆಣ್ಣು... ಹೀಗಿರುವಾಗ ಹೆಣ್ಣು ಮಗುವಿನ ಬಗ್ಗೆ ಯಾಕಿಷ್ಟು ಅಸಹನೆ?

ಹೆಮ್ಮೆಯ ವಿಷಯವೆಂದರೆ, ಬಂಟ ಸಮಾಜದಲ್ಲಿ ಹೆಣ್ಣಿಗೆ ವಿಶೇಷವಾದ ಸ್ಥಾನಮಾನವಿದೆ. ಬಂಟ ಕುಟುಂಬದಲ್ಲಿ ಹೆಣ್ಣು ಮಗು ಹುಟ್ಟಿದಾಗ ಮನೆಯ ಸದಸ್ಯರು ಸಂಭ್ರಮಿಸುವ ಪರಿ ವರ್ಣನಾತೀತ. ಸ್ತ್ರೀ ಪ್ರಾಧಾನ್ಯತೆಗೆ ಒತ್ತು ಕೊಟ್ಟು, ಹೆಣ್ಣು ಮಕ್ಕಳನ್ನು ಯಾವುದೇ ಭೇದ, ಭಾವವಿಲ್ಲದೇ, ಸರಿ ಸಮಾನವಾಗಿ ಬೆಳೆಸಿ, ಓದಿಸಿ, ಉತ್ತಮ ಭವಿಷ್ಯ ಕಲ್ಪಿಸಿ ಎಲ್ಲಾ ಕ್ಷೇತ್ರಗಳಲ್ಲೂ ಮಹತ್ತರ ಸಾಧನೆಗೆ ಪ್ರೇರೇಪಿಸುವುದರ ಮೂಲಕ ಸಮಾಜದ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದೇವೆ.

ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಂದು ಹೆಣ್ಣಿನ ಬೆಂಬಲ, ತ್ಯಾಗ, ಪರಿಶ್ರಮದ ಕೊಡುಗೆ ಇರುತ್ತದೆ. ಆ ಹೆಣ್ಣು ನಿಮ್ಮ ತಾಯಿ, ಮಡದಿ, ಮಗಳು, ಅಕ್ಕ, ತಂಗಿ, ಸ್ನೇಹಿತೆ ಹೀಗೆ ಯಾರೇ ಆಗಿರಬಹುದು, ಆಕೆಯನ್ನು ಗೌರವಿಸಿ. ಆಕೆಗೂ ಒಂದು ಕನಸಿರುತ್ತದೆ ಅದನ್ನು ಸಾಕಾರಗೊಳಿಸಲು ಪ್ರೋತ್ಸಾಹಿಸಿ. ಸಮಾಜದ ಪ್ರತಿಯೊಂದು ಹೆಣ್ಣನ್ನು ಗೌರವಿಸಿ, ಉಳಿಸಿ, ಬೆಳೆಸಿ.

ಕೊನೆಯಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪ ಅವರ ಸಾಲುಗಳೊಂದಿಗೆ,

ಮನೆಮನೆಯಲಿ ದೀಪ ಮುಡಿಸಿ । ಹೊತ್ತು ಹೊತ್ತಿಗೆ ಅನ್ನ ಉಣಿಸಿ ।
ತಂದೆ ಮಗುವ ತಬ್ಬಿದಾಕೆ । ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೆ ಸಾಕೆ...

# Women Today



**Dr. Meera Krishnappa**

March 8th is round the corner and the world will celebrate 'Women's Day' with all the accompanying hype and then promptly forget about it for the remainder of the year. After all, a woman is a woman, is a woman... so does it matter? In the words of Louisa M Alcott, "Women have been called queens for a long time, but the kingdom given them isn't worth ruling."

Traditionally, women were considered to be care takers of the home. They had to look after the running of the family smoothly, they had to manage the expenses in the most economical way possible, they had to look after aged in-laws, nurture the children etc. They were judiciously kept out of decision making matters as the primary role of women was not that of ruling the family. They were expected to obey orders of the husband, the elders of the family but kept in isolation when it came to major decisions related to the family.

Women were not too educated in the bygone eras. They would be married off one day to their in-laws place and hence would not need too much of knowledge was the previous thinking. Women, who were still part of families that thought otherwise, saw some respite in this narrow minded approach. There were women in olden days too, who were well educated and led paths of success in many spheres of life because of support from their families. It is these women who led paths of change and brought about a transformation in the way people viewed women in the society.

Women have completely transformed in the modern day. The urban woman especially has changed from being a mere homemaker to the modern day multitasking woman, handling responsibilities without fear. She has taken on the world with confidence. Women of today handle their duties and chores at home, manage a career outside their homes, nurture their children and balance their family lives with their professions. This is the scene in most of the urban households today. The modern day woman is independent, takes the right decisions boldly, stands up for her rights and walks a path of success. Kalpana Chawla, Kiran Bedi, Sushma Swaraj, Nirmala Sethuraman and many more are women achievers in their chosen fields.

Today most women are well educated, have crossed horizons, and their presence can be felt in many male dominated areas. We see women rise as journalists, politicians, doctors, engineers, lawyers, actors and in many other professional spheres. Women of today choose the right career paths that determine their future and thus we see them excelling in every walk of life but this is just one side of the story.

Women in downtrodden regions and rural backgrounds have still to compete a lot in terms of their urban counterparts. Not that the rural women are backward in any aspect, but the change and transformation that the urban woman sees, is definitely a little slower to the rural women. Women, be it from urban or rural backgrounds, still face harassment and

humiliation in domestic as well as professional circles. However high they reach in their lives, women are still made to feel helpless when men mete out unhealthy treatments and behave badly in front of them.

We talk of women having achieved great feats and laurels, but there always exists a sad part of the story which we cannot move away from. The necessity of the day is a strong legislation and most importantly, education and empowerment of women that will take them away from being part of these dark areas of the country.

We have women who are bus drivers, metro rail drivers, conductors, post masters, flight squadrons, pilots, scientists, etc. Women have proved to the world that there is literally nothing that is unconquerable by them. They have taken over male bastions and proved successful in their own ways. Women today are law makers; we have had a president and a prime minister in our nation, both women. Women in power steal the limelight and make men respect their decisions.

Though women have achieved success in various spheres of life, the dark areas of humanism do exist even in modern days. We get to hear plenty of cases of rapes, mental and physical harassments, dowry deaths, cases of domestic violence, etc. This news fills our daily newspapers and is a very important part of the ugly truth of mankind. Women today are definitely empowered with self confidence and boldness to face the world without fear, yet in terms of women's safety, there is still lots to be achieved.

Crimes against women such as rape, acid-throwing, sexual harassment, dowry killings, domestic violence, honour killings, female infanticide, sex selective abortion and the forced prostitution of young girls have been rampant in India and are definitely on the rise. Many women fear to go out of their houses after sunset. They fear being manhandled by brutal men. Women are also prone to plenty of incidents of chain snatching, molestation, eve teasing etc. Such incidents morally bring down the courage of women and leave them pleading for help and support from the male members of the family.

The infamous case of Nirbhaya and the Jessica Lall murder case throw light on how men can stoop to any levels to bring down the morale of a woman. Men who do any kind of harassment or offence to women should be severely punished under law. They should be brought under the pangs of law and awarded the highest punishment possible.

Women play many roles in their lives, that of a daughter, sister, wife, daughter-in-law, mother, friend, colleague, professional and the list is never ending. With addition of roles, comes addition of responsibilities and women have to handle everything in a very dignified manner. The modern day woman is more aware of the society around her and believes in her strengths, handles her weaknesses with grace, identifies the goodness in things and is socially responsible towards her duties. Women don many roles and handle them with grace. There is no profession that does not have women enrolment. Yet we have blatant gender discrimination.

In most Indian families, women do not own any property in their own names, and do

not get a share of parental property. Due to weak enforcement of laws protecting them, women continue to have little access to land and property. In India, women's property rights vary depending on religion, and tribe, and are subject to a complex mix of law and custom.

If we look at the gender pay gap, the story is no better. An International Labour Organisation (ILO) study of 83 countries found that women earn 10%-30% less than men. Gender analyses of labour markets tend to look at women's participation in paid employment compared with men's – and not the huge informal sector in which so many women work; selling a handful of tomatoes that they have grown in their gardens, picking cotton or sewing at night long after their children have gone to bed. While they cannot be said to be representative, the highest positions are even more elusive for women: only seven of 150 elected heads of state in the world are women, and only 11 of 192 heads of government. The situation is similar at the level of local government.

In the private sector, women are on most boards of directors of large companies but their number remains low compared to that for men. Globally, research by accountancy firm Grant Thornton in 2013 found that women now fill 24% of senior management roles, a percentage that is gradually creeping up. But women make up only 16% of board members in the rich-world G7 economies compared with 26% in the Bric economies (Brazil, Russia, India and China) and 38% in the Baltic countries.

Women don't have power in other areas either – even in 2013, they still made up only 21.4% of parliamentarians. Most recent figures show that 17.2% of ministerial posts worldwide are held by women – up from 16.1% in 2008, which shows just how slow progress can be.

Lack of political voice is critical, given that this is where laws and policies that affect whole populations – both male and female – are made. In the UK, Dame Helena Kennedy, QC, noted in a speech on International Women's Day:

"You don't have to believe in patriarchy to realise that the law was made by men and is dominated by men, and that the same goes for parliament. This means that in all the making of the law, women are largely absent. It is not surprising that the law doesn't work for women."

What is interesting too, is that despite the fact that in many countries, girls are forging ahead of boys when it comes to educational attainment, this doesn't always pay dividends when it comes to employment. Girls and young women are excelling but are failing to translate this into employment. As one report from the World Bank notes: "Progress in education is not matched by higher labour force participation. By age 24, women lag behind in all regions.

Women's day is celebrated, not to glorify the beauty and grace of women, but to bring about awareness among the public regarding women's safety and empowerment in all ways. Women need to strengthen themselves by building up their inner strengths. They should work on increasing their moral strengths and

face the world without fear. Women should be taught to be bold and outgoing in these days of modernism.

We should empower the women to lead independent lives. They should take independent decisions regarding their careers, professions, choices in matters of life partners, etc. They should have a say in all important matters of the family. They should be taught to be self reliant and should not depend on anyone to meet their financial needs; they should be taught to handle their own expenses. When women are empowered, society is empowered. Women's empowerment isn't just a catchy slogan; it's a key factor in the social and economic success of nations. When women succeed, everyone benefits. But the key factor is to sensitize the men and boys to the needs and feelings of women. Women should not be objectified and used as tools of revenge. The day our men wake up to this fact, may be then women and girls will have a safe and secure environment.

To conclude,

**"Feminism isn't about making women stronger. Women are already strong, It is about changing the way the world perceives that strength."**

***- G.D. Anderson***

# ರಾಧಾಂತರಂಗ

ಯಮುನೆಯ ತೀರದಲಿ
ಮನಸೆಳೆದ ಮುದ್ದು ಮೋಹನ
ಮೊದಲ ನೋಟದಲ್ಲಿಯೇ ರಾಧೆಯ
ಹೃದಯಾಂತರಾಳದಲಿ
ಮನೆ ಮಾಡಿದೆ

ದಿನ ದಿನವೂ ಕೃಷ್ಣನ ನೆನೆಸುತ
ಯಮುನೆಯ ತೀರದಲ್ಲೆಲ್ಲ
ಆಕೆಯ ಹೆಜ್ಜೆಯ ಗುರುತುಗಳು
ಮಲ್ಲಿಗೆಯ ಘಮಘಮ
ಕಾಲ್ಗೆಜ್ಜೆಗಳ ಸರಿಗಮ
ದೂರದಲ್ಲೆಲ್ಲೋ ಅಲೆ ಅಲೆಯಾಗಿ
ಕೇಳಿ ಬರುತಿಹ ಕೊಳಲ ದನಿಯನಾಲಿಸುತ
ರಾಧೆ ಹುಚ್ಚಿಯಂತೆ ಅಲೆದಾಡಿದಾಗ
ಆಕೆಯ ಮರುಳು ಮಾಧವ
ಒಮ್ಮೆ ಅತ್ತ ಆ ದಡದಲಿ
ಮತ್ತೊಮ್ಮೆ ಇತ್ತ ಈ ದಡದಲಿ
ನಸು ಮುನಿಸು ಪ್ರೇಮ ನಿವೇದನೆ
ದಿನ ನಿತ್ಯ ಯಮುನಾ ತೀರದಲಿ
ಮುರಳೀ ಮೋಹನನ ದರ್ಶನ
ಕರ್ತವ್ಯದ ಕರೆ
ಗೋಪಿ ನಂದನನ ಮುಖ ಮಧುರೆಯತ್ತ
ರಾಧೆಯ ಕಂಗಳಲಿ ಕಂಬನಿಯ ಧಾರೆ ಧಾರೆ
ಕರಗಿದ ದೇವಕಿ ಕಂದ
ತನ್ನ ಜೀವದ ಜೀವ
ಕೊಳಲನ್ನು ಅವಳ ಕೈಯೊಳಗಿಟ್ಟು
ನುಡಿದ ಮುಂದಿನ ದಿನಗಳಲ್ಲಿ
ಇದರಲಿ ನನ್ನ ಕಾಣು
ಆಕೆಯ ಬದುಕು ಭವಿಷ್ಯ
ಮುಡಿಪಾಯಿತು ಅವನ ಸವಿನೆನಪಿಗೆ
ನಿಷ್ಕಲ್ಮಶ ನಿರ್ಮಲ ಪ್ರೇಮದ ಕುರುಹಾಗಿ

**ಡಾ. ಕರುಣಾಕರ ಎನ್. ಶೆಟ್ಟಿ ಪಣಿಯೂರು**

# ಬಂಟರೆಂಬ ಧೀಮಂತರು



ಶೈನಾ ಶ್ರೀನಿವಾಸ್ ಶೆಟ್ಟಿ

**ಕರಾವಳಿಯ ಬಂಟರು:**

ಕರಾವಳಿಯಲ್ಲಿ ವಿವಿಧ ಜಾತಿಯ ಜನರು ತಮ್ಮದೇ ಆದ ರೀತಿ-ನೀತಿ, ರಿವಾಜುಗಳೊಂದಿಗೆ ಅನೇಕ ವಿಶಿಷ್ಟ ಜೀವನ ಶೈಲಿಯೊಂದಿಗೆ ಬದುಕುತ್ತಿದ್ದಾರೆ. ಅಲ್ಲಿನ ಸಂಸ್ಕೃತಿ ಹಾಗೂ ಸಂಪ್ರದಾಯದ ಚೌಕಟ್ಟಿನಲ್ಲಿ ಅನೇಕ ಪಂಗಡದ ಜನರು ವಾಸಿಸುತ್ತಿದ್ದಾರೆ. ಅದರಲ್ಲಿ ಬಂಟ ಯಾನೆ ನಾಡವ ಸಮುದಾಯವು ಒಂದು.

ಬಂಟ ಸಮುದಾಯದ ಜನ ತಮ್ಮದೇ ಆದ ವಿಶಿಷ್ಟ ರೀತಿಯ ಪ್ರಸಿದ್ಧತೆಯನ್ನು ಹೊಂದಿದ ಮನೆತನಗಳನ್ನು ಹೊಂದಿ, ಪಂಚಾಯತಿಕೆಯ ಅಧಿಕಾರವನ್ನು ತಮ್ಮದಾಗಿಸಿಕೊಂಡಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಪಟೇಲ್, ಪಟೇಲಿಕೆಯನ್ನು ಮಾಡಿಕೊಂಡು ಹೆಬ್ಬಾಗಿಲ ಮನೆಯಲ್ಲಿ ವಾಸಿಸುವ ಗೌರವಾನ್ವಿತ ಸಮುದಾಯವೇ ಬಂಟರು.

ಕರಾವಳಿಯಲ್ಲಿ ದೊರಕಿದ ಶಾಸನಗಳು, ಪಾಡ್ದನಗಳ ಪ್ರಕಾರ 'ಬಂಟ' ಎನ್ನುವುದು ಕೇವಲ ಒಂದು ಜಾತಿಯ ಸೂಚಕವಲ್ಲ. ಅದು ಶೌರ್ಯದ ಸಂಕೇತವಾಗಿದೆ. ಕೋಟಿ ಚೆನ್ನಯ್ಯರ ಪಾಡ್ದನಗಳಲ್ಲಿ ಮತ್ತು 'ಬಂಟರ ಸಂಧಿ'ಯಲ್ಲಿ ಈ ಮಾತನ್ನು ಉಲ್ಲೇಖಿಸಿದ್ದಾರೆ.

ಕುಂದಾಪುರದ ಬೈಂದೂರಿನಿಂದ ಕಾಸರಗೋಡಿನ-ವರೆಗೆ ಒಟ್ಟಾರೆ ಕರಾವಳಿ ಪ್ರದೇಶಗಳಲ್ಲಿ ಬಂಟರ ಮನೆತನದ ಮನೆಗಳು ಕಾಣ ಸಿಗುತ್ತವೆ. ಬಂಟರ ಯಾನೆ ನಾಡವರು ಎಂದು ತಮ್ಮನ್ನು ಕರೆಸಿಕೊಳ್ಳುತ್ತಿದ್ದಾರೆ. ಹಿಂದೆ ಬಂಟರು ಆಳುವ ಅರಸನಾಗಿ, ಮಣ್ಣಿನ ಮಗನಾಗಿ, ಅಧಿಕಾರದ ಪಾಳೆಯಗಾರನಾಗಿ, ಗುತ್ತು-ಬೀಡಿನ ಮನೆತನದ ಕುವರನಾಗಿ, ಒಟ್ಟಾರೆ ಒಬ್ಬ ಅಧಿಕಾರಸ್ಥನಂತೆ ಅತ್ಯಂತ ಆಡಳಿತ ಹಾಗೂ ಆಡಳಿತಾತ್ಮಕವಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಣೆ ಮಾಡಿರುತ್ತಾನೆ .

**ಬಂಟ ಸಮುದಾಯದ ಉಗಮ:**

'ಬಂಟ ಸಮುದಾಯ ಹೇಗೆ ಹುಟ್ಟಿತು?' ಎನ್ನುವುದರ ಬಗ್ಗೆ ಒಂದು ಐತಿಹಾಸಿಕ ರೋಚಕ ಕಥೆಯಿದೆ. ಇದರಲ್ಲಿ ಜೈನರಿಂದ ಬಂಟರು ಹೇಗೆ ಬೇರೆಯಾದರು ಎನ್ನುವ ಕಥೆ ಈಗಲೂ ಜನಜನಿತ-ವಾಗಿದೆ. "ದಕ್ಷಿಣ ಕನ್ನಡ ಚರಿತೆ"ಯನ್ನು ಬರೆದ ಶೀನಪ್ಪ ಹೆಗ್ಗಡೆಯವರ ಸಂಶೋಧನಾ ಗ್ರಂಥದಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

ಹಿಂದೆ ಮಯೂರ ವರ್ಮ ಎಂಬ ರಾಜನು ಬನವಾಸಿಯ ಕದಂಬರ ದೊರೆಯಾಗಿದ್ದ. ಅತ್ಯಂತ ಪ್ರಭಾವಿ, ಸಾಹಸಿ ಧೈರ್ಯವಂತನಾದಂತಹ ಮಯೂರ ವರ್ಮ ಒಮ್ಮೆ ನವಿಲನ್ನು ಕೊಂದು ಅದರ ರಕ್ತವನ್ನು ಕುಡಿಯುತ್ತಾನೆ. ಇವನ ಸಾಹಸಕ್ಕೆ ತಲೆಬಾಗಿದ ರಾಜ್ಯದ ಪಟ್ಟದ ಆನೆ ಆತನಿಗೆ ವಿಜಯದ ಮಾಲೆಯನ್ನು ಹಾಕುತ್ತದೆ. ಇದನ್ನು ನೋಡಿದ ಊರಿನ ಜನ ಅವನನ್ನೇ ರಾಜನನ್ನಾಗಿ ಮಾಡಿದ್ದರು. ರಾಜನಾದ ಮಯೂರ ವರ್ಮ ಮೂಲತಃ ಜೈನ ಧರ್ಮದವನಾಗಿದ್ದ. ಜೈನ ಧರ್ಮದಲ್ಲಿ ಪ್ರಾಣಿ ಹಿಂಸೆ ನಿಷಿದ್ಧವಾಗಿತ್ತು. ಹಾಗಾಗಿ ಜೈನರು ಅವನನ್ನು ತಮ್ಮ ಧರ್ಮದಿಂದ ದೂರ ಮಾಡುತ್ತಾರೆ. ನಾನು ಮಾಡಿರುವುದು ರಾಜ ಧರ್ಮಕ್ಕೆ ವಿರೋಧ ಅಲ್ಲವೆಂದು ಪ್ರತಿವಾದಿಸುತ್ತಾನೆ. ಕೊನೆಗೆ ತಾನೇ ಸೋತು ಜೈನ ಧರ್ಮವನ್ನು ತೊರೆದು ಬರುತ್ತಾನೆ ಮಯೂರ ವರ್ಮ.

ಹೀಗೆ ಜೈನ ಧರ್ಮವನ್ನು ತೊರೆದು ಬಂದ ಮಯೂರ ವರ್ಮನನ್ನು ಅನೇಕರು ಅನುಸರಿಸಿ ಬರುತ್ತಾರೆ. ತನ್ನನ್ನು, ತನ್ನ ವಿಚಾರಧಾರೆಯನ್ನು ಅನುಸರಿಸಿ ಬಂದ ಎಲ್ಲರನ್ನೂ ಮಯೂರ ವರ್ಮನು "ಬಂಟರು" ಎಂದು ಕರೆದನು. ನಮಗೆ ದೊರೆತಿರುವ ಎಲ್ಲಾ ಮಾಹಿತಿಯ ಪ್ರಕಾರ ಬಂಟರೆಂದರೆ ಅತ್ಯಂತ ಪ್ರಭಾವಶಾಲಿ ಜನಾಂಗವೆಂದು ಗುರುತಿಸಲಾಗಿದೆ. ಬಂಟರು ಜನಾನುರಾಗಿಗಳು, ಧೈರ್ಯವಂತರು, ಸ್ವಾಭಿಮಾನಿಗಳು ಹಾಗೂ ಪರರ ಕಷ್ಟಕ್ಕೆ ಸದಾ

ಮುಂದಿರುವ "ಧೀಮಂತರು" ಎಂದು ತಮ್ಮನ್ನು ಕರೆಸಿಕೊಂಡಿದ್ದಾರೆ.

**ಅಳಿಯ ಸಂತಾನ ಪದ್ಧತಿಯ ಇತಿಹಾಸ:**

ಬ್ರಿಟಿಷರ ಕಾಲದಿಂದಲೂ ತುಳುನಾಡಿನಲ್ಲಿ ಸಾಮಂತ ಅರಸರಾಗಿ ಬಂಟರು ತಮ್ಮ ಸೇವೆಯನ್ನು ಸಲ್ಲಿಸಿದ್ದರು ಎಂದು ನಂಬಲಾಗಿದೆ. ಬಂಟರಲ್ಲಿ ಸ್ತ್ರೀ ಪ್ರಾಧಾನ್ಯತೆಯನ್ನು ಕಾಣಬಹುದು.

ಬಂಟರಲ್ಲಿ ಅಳಿಯ ಕಟ್ಟು ಈಗಲೂ ಕೂಡ ಪ್ರಚಲಿತದಲ್ಲಿದೆ. ಅಳಿಯಕಟ್ಟು ಒಂದು ವಿಶಿಷ್ಟವಾದ ಸಂಪ್ರದಾಯ. ಅದರಲ್ಲಿ ಮಾವನ ಆಸ್ತಿಯ ಅಧಿಕಾರ ಅವನ ಮಗನಿಗಲ್ಲದೆ ಅಳಿಯನಿಗೆ ಸೇರುತ್ತದೆ. ಇಲ್ಲಿ ಸ್ತ್ರೀ ಪ್ರಾಧಾನ್ಯತೆಯನ್ನು ಗುರುತಿಸಬಹುದು. ಬಂಟರಲ್ಲಿ ಅಳಿಯ ಕಟ್ಟು ಪದ್ಧತಿ ಪರಂಪರಾಗತವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಭೂತಾಳ ಪಾಂಡ್ಯನ ಕಥೆಯನ್ನು ಉದಾಹರಿಸಲಾಗಿದೆ. ನೂರು ಜನ ಮಕ್ಕಳನ್ನು ಹೊಂದಿದ್ದ ಭೂತಾಳ ಪಾಂಡ್ಯ ಬಾರ್ಕೂರು ಸಂಸ್ಥಾನದ ತುಂಡರಸನಾಗಿದ್ದ. ಈತನೊಬ್ಬ ದೊಡ್ಡ ವ್ಯಾಪಾರಸ್ಥ-ನಾಗಿದ್ದ. ತನ್ನ ವ್ಯಾಪಾರ ವಹಿವಾಟುಗಳನ್ನು ವೃದ್ಧಿಗೊಳಿಸುವುದಕ್ಕೋಸ್ಕರ ಬೃಹತ್ ಗಾತ್ರದ ಹಡಗನ್ನು ಕಟ್ಟುತ್ತಾನೆ. ಬೇರೆ ಬೇರೆ ದೇಶ, ರಾಜ್ಯಗಳನ್ನು ಸುತ್ತಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವುದು ಅವನ ಉದ್ದೇಶವಾಗಿತ್ತು. ಹೀಗೆ ಹಡಗು ನಿರ್ಮಾಣವಾದ ನಂತರ ಅದನ್ನು ಸಮುದ್ರಕ್ಕೆ ಇಳಿಸುತ್ತಾನೆ. ವಿಪರ್ಯಾಸವೆಂದರೆ ಎಷ್ಟೇ ಪ್ರಯತ್ನಿಸಿದರೂ ಆ ಹಡಗು ಮುಂದಕ್ಕೆ ಚಲಿಸುವುದೇ ಇಲ್ಲ. ಅಯ್ಯೋ ಹೀಗೇಕಾಯಿತೆಂದು ಮನೆಯ ದೈವದ ದರ್ಶನವನ್ನು ಮಾಡಿಸಿದಾಗ ಅದರಲ್ಲೊಂದು ಪೆಡಂಭೂತ ಸೇರಿಕೊಂಡ ಬಗ್ಗೆ ತಿಳಿಯುತ್ತದೆ. ಅದನ್ನು ಹೇಗೆ ದೂರ ಮಾಡುವುದೆಂದು ಕೇಳಿದಾಗ, "ಆ ಭೂತಕ್ಕೆ ಕುಟುಂಬದೊಳಗಿನ ಒಂದು ನರ ಬಲಿ ಬೇಕೆಂದು ತಿಳಿಯುತ್ತದೆ".

ಆಗ ರಾಜ "ನನಗೆ ಹೇಗಿದ್ದರೂ ನೂರು ಜನ ಮಕ್ಕಳು, ನನ್ನ ಯಶಸ್ಸನ್ನು ಬಯಸುವ ನನ್ನ ಹೆಂಡತಿ ಯಾವುದಾದರೊಬ್ಬ ಮಗನನ್ನು ನರ ಹವಿಸ್ಸಿಗೆ ಕೊಟ್ಟೆ ಕೊಡುತ್ತಾಳೆ ಎಂಬ ಅಚಲವಾದ ನಂಬಿಕೆಯಿಂದ ನರ ಬಲಿಗೆ ಒಪ್ಪುತ್ತಾನೆ ಭೂತಾಳ ಪಾಂಡ್ಯ". ಆದರೆ ಮನೆಯ ಪರಿಸ್ಥಿತಿಯೇ ಬೇರೆ ಇತ್ತು. ತನ್ನ ಹಾಗೂ ಭೂತದ ನಡುವೆ ನಡೆದ ಮಾತನ್ನು ಹೆಂಡತಿಗೆ ಹೇಳಿದಾಗ, ಅವಳು ಯಾವ ಮಗುವನ್ನೂ ಕೂಡ ಕೊಡಲು ಒಪ್ಪದೇ ಮಕ್ಕಳೊಂದಿಗೆ ರಾತ್ರೋರಾತ್ರಿ ತನ್ನ ತವರಿಗೆ ತೆರಳುತ್ತಾಳೆ. ಇದೇ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡ ರಾಜ ಅನಾರೋಗ್ಯಕ್ಕೆ ತುತ್ತಾಗುತ್ತಾನೆ.

ದೂರದೂರಿನಲ್ಲಿ ನೆಲೆಸಿದ ಭೂತಾಳ ಪಾಂಡ್ಯನ ತಂಗಿಗೆ ಒಬ್ಬನೇ ಒಬ್ಬ ಪುತ್ರನಿರುತ್ತಾನೆ. ಊರಿನ ಪ್ರಜೆಗಳ ಮೂಲಕ ತಂಗಿಗೆ ಅಣ್ಣನ ಸಂಕಟ ತಿಳಿಯುತ್ತದೆ. ಆಕೆ ಅಣ್ಣನ ಕಷ್ಟಕ್ಕೆ ಧಾವಿಸಿ ಬರುತ್ತಾಳೆ. ಅಣ್ಣನ ದುಃಖವನ್ನು ಕಂಡು ದುಃಖಿತಳಾದ ತಂಗಿ ತನ್ನ ಏಕೈಕ ಮಗನನ್ನು ಹವಿಸ್ಸು ಕೊಡಲು ಒಪ್ಪುತ್ತಾಳೆ. ತಂಗಿಯ ಮಾತನ್ನು ಕೇಳಿ ರಾಜ ಮೊದಲಿಗೆ ಒಲ್ಲೆನೆಂದರೂ ತಂಗಿಯ ಒತ್ತಾಯಕ್ಕೆ ಒಪ್ಪುತ್ತಾನೆ.

ಅವಳ ಮಾತಿನಂತೆ ತನ್ನ ಅಳಿಯನನ್ನು ಭೂತಕ್ಕೆ ಹವಿಸ್ಸು ಕೊಡಲು ರಾಜ ಮುಂದಾಗುತ್ತಾನೆ. ತಂಗಿಗೆ ಅಣ್ಣನ ಮೇಲಿದ್ದ ಅಚಲವಾದ ಪ್ರೀತಿಯನ್ನು ಕಂಡು ಆ ಭೂತಾತ್ಮ ಕೃತಾರ್ಥನಾಗುತ್ತದೆ. ಈ ಅಣ್ಣ – ತಂಗಿಯ ಸುಮಧುರ ಪ್ರೀತಿ, ಅಕ್ಕರೆ ಗೌರವವನ್ನು ಕಂಡು ಅವರಿಬ್ಬರನ್ನು ಹರಸಿ ಹವಿಸ್ಸನ್ನು ಪಡೆಯದೆ ಆಶೀರ್ವದಿಸುತ್ತದೆ. ಅಂದಿನಿಂದ ಈ ಸಂತಾನ ಅಳಿಯ ಸಂತಾನ ಅಂದರೆ ಅಳಿಯ ಕಟ್ಟು ಎಂದು ಲೋಕ ಪ್ರಸಿದ್ಧಿಯನ್ನು ಹೊಂದಲಿ ಎಂದು ಭೂತಾಳ ಪಾಂಡ್ಯನನ್ನು ಹರಸಿ ಹಾರೈಸುತ್ತದೆ ಆ ಭೂತ. ಈ ಕಾರಣದಿಂದ ಅಳಿಯಕಟ್ಟು ಹುಟ್ಟಿಕೊಂಡಿತು ಎನ್ನುತ್ತದೆ ನಮ್ಮ ಇತಿಹಾಸ. ಹೀಗೇ ಅಳಿಯ ಕಟ್ಟಿನ ಬಗ್ಗೆ ನಮಗೆ ಬೇರೆ ಬೇರೆ ಕಥೆಗಳು, ಉಪಕಥೆಗಳು ಕರಾವಳಿಯಾದ್ಯಂತ ಸಿಗುತ್ತವೆ. ಆದರೆ ಈ ಕಥೆಯ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ ಮತ್ತು ಭೂತಾಳ ಪಾಂಡ್ಯನೊಬ್ಬ ಐತಿಹಾಸಿಕ ವ್ಯಕ್ತಿ ಎನ್ನುವುದಕ್ಕೆ ಯಾವುದೇ ಶಾಸನಗಳು ನಮಗೆ ದೊರೆಯುವುದಿಲ್ಲ ಎಂದು ಡಾ. ಗುರುರಾಜ್ ಭಟ್ಟ ಮತ್ತು ಅನೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ಈ ಕಥೆ ನಮ್ಮ

ಕರಾವಳಿಯ ಜನರ ಬಾಯಿಯಲ್ಲಿ ಮನೆ ಮಾತಾಗಿದೆ.

**ಬಂಟರ ಮನೆಗಳು ಮತ್ತು ಸಾಂಪ್ರದಾಯಿಕ ಆಚರಣೆಗಳು:**

ಬಂಟರ ಆಡಳಿತವನ್ನು ಆಳುಪ ರಾಜರ ಕಾಲದಿಂದಲೂ ಗುರುತಿಸಬಹುದಾಗಿದೆ. ವಿಜಯನಗರ ಸಾಮ್ರಾಜ್ಯದ ಆಡಳಿತಾಧಿಕಾರದಲ್ಲಿ ಬಂಟರು ಭಾಗವಹಿಸಿದ್ದರು ಎಂದು ಇತಿಹಾಸ ನಮಗೆ ತಿಳಿಸುತ್ತದೆ. ಈ ಬಂಟ ಸಮಾಜವನ್ನು ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾವಶಾಲಿ ಜನಾಂಗವೆಂದು ಗುರುತಿಸಬಹುದಾಗಿದೆ. ಇವರು ಸ್ವಾಭಿಮಾನಿಗಳು, ಧೈರ್ಯವಂತರು, ನ್ಯಾಯ ಪಂಚಾಯತಿಕೆ ವಿಷಯದಲ್ಲಿ ಸದಾ ಮುಂದೆ ಇರುವ ನ್ಯಾಯ ರಕ್ಷಕರು ಆಗಿದ್ದಾರೆ ಎಂದು ಇತರ ಸಮೂಹದವರು ಬಣ್ಣಿಸುತ್ತಾರೆ.

ಮೂಲತಃ ಬಂಟರು ಬೇಸಾಯಗಾರರಾಗಿದ್ದು, ಗ್ರಾಮೀಣ ಕರ್ನಾಟಕದ ಸಂಸ್ಕೃತಿಯ ರಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಬಂಟರ ಮನೆಗಳನ್ನು ವರ್ಣಿಸುವುದು ನಿಜಕ್ಕೂ ಒಂದು ಅದ್ಭುತ, ಏಕೆಂದರೆ ಅವರ ಮನೆಗಳು ಸುಂದರವಾದ ಕೆತ್ತನೆಯಿಂದ ಕೂಡಿದ ಹೆಬ್ಬಾಗಿಲು, ದೊಡ್ಮನೆ, ಚಾವಡಿಗಳನ್ನು ಹೊಂದಿದ್ದು, ಒಂದೇ ಮಾತಿನಲ್ಲಿ ಹೇಳುವುದಾದರೆ ಕೆತ್ತನೆಗಳ ಮರದ ಅರಮನೆಯೆನ್ನಬಹುದು. ಮನೆಯ ಚಾವಡಿ ಎಂದರೆ ನೂರು ಮಂದಿ ಕುಳಿತುಕೊಳ್ಳುವಷ್ಟು ವಿಶಾಲವಾಗಿದೆ. ಮಳೆಗಾಲ ಬಂತೆಂದರೆ ಬಂಟರ ಮನೆಯಲ್ಲಿ ಹಿಂದೆ ಕಲಾ ಸಿರಿಯ ವೈಭೋಗವನ್ನು ನೋಡಬಹುದಿತ್ತು.

ಮನೆಯ ಹೆಬ್ಬಾಗಿಲಿನಲ್ಲಿ ತಾಳಮದ್ದಳೆಯನ್ನು ನಡೆಸುತ್ತಿದ್ದರು. ಶ್ರಾವಣ ಮಾಸದಲ್ಲಿ ಬಂಟರ ಮನೆಯ ಹಿರಿಯರು ರಾಮಾಯಣ, ಮಹಾಭಾರತ, ಜೈಮಿನಿ ಭಾರತವನ್ನು ಓದುತ್ತಿದ್ದರು. ಇಂದಿಗೂ ಕೂಡ ಬಂಟ ಮನೆತನದಲ್ಲಿ ಭಜನಾ ಕಾರ್ಯಕ್ರಮವನ್ನು ನೋಡಬಹುದು. ಬಂಟ ಮಹಿಳೆಯರು ತಮ್ಮ ಮನೆಯಲ್ಲಿ ಸಂಜೆಯ ಹೊತ್ತು ಭಜನೆ, ಸೌಂದರ್ಯಲಹರಿ, ರಾಮಾಯಣವನ್ನು ಓದುವುದು ಇಂದಿಗೂ ಕೂಡ ಚಾಲ್ತಿಯಲ್ಲಿದೆ. ಇನ್ನು ಹೆಚ್ಚಾಗಿ ಕುಂದಾಪುರದ ಸುತ್ತಮುತ್ತಲೂ ಆಷಾಢ ಮಾಸದಲ್ಲಿ ಕಂಡುಬರುವ ಆಸಾಡಿ ಹಬ್ಬದ ವರ್ಣನೆಯೇ ಮನಸ್ಸಿಗೆ ಮುದವನ್ನು ನೀಡುತ್ತದೆ.

ಬಂಟರ ಮನೆಗಳಲ್ಲಿ ಆಚರಿಸುವ ನವರಾತ್ರಿ ಹಬ್ಬದ ಆಚರಣೆಯೂ ಕೂಡ ವಿಭಿನ್ನವಾಗಿದೆ. ಇನ್ನು ಹೂವಿನ ಕೋಲು, ಹೊಸ್ತಿಲ ಪೂಜೆ, ಹೊಸತ್ತು, ಹಣಬಿನ ಗದ್ದೆಗೆ ಹಣಬು ತುಂಬುವುದು ಎನ್ನುವ ಕುಂದಾಪುರ ಬಂಟರ ಈ ವಿಶೇಷ ಕೃಷಿ ಆಚರಣೆ ಇಂದಿಗೂ ಕೂಡ ಜೀವಂತವಾಗಿದೆ ಎನ್ನುವುದಕ್ಕೆ ಹೆಮ್ಮೆ ಅನಿಸುತ್ತದೆ.


ತುಳಸಿ ಕಟ್ಟೆಯ ಮುಂದೆ ಮಾಡುವ "ವಸಂತ", ದಾಸರ ಭಜನೆಗಳು, ಆಸಾಡಿ ಹಬ್ಬ, ಜಕ್ಕಣಿ, ಕೊಲೆ ಭೂತ, ಭೂತದ ನೇಮ, ಪಾಡ್ದನ, ಬಂಟರ ಸಂಧಿಗಳು, ಜನಪದ ಆಚರಣೆಗಳು, ಯಕ್ಷಗಾನ, ಕೋಲ, ಕಂಬಳ, ನೇಮ, ಮಾರಿ ಪೂಜೆ, ದರ್ಶನ, ತಾಳ ಮದ್ದಳೆ, ಕೆಂಡ ಸೇವೆ.... ಹೀಗೆ ಹತ್ತು ಹಲವು ಸೇವಾ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂಟರು ಜನಾನುರಾಗಿಯಾಗಿದ್ದಾರೆ.

ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಮನೆಯಲ್ಲಿ ಅನಾದಿ ಕಾಲದಿಂದಲೂ ಕೂಡ ಆಚರಿಸಿಕೊಂಡು ಬರಲಾಗುತ್ತಿದೆ. ದೈವ ಭೂತಗಳ ಆರಾಧನೆಯಾದ "ಕೋಲ" ಇಂದಿಗೂ ಕೂಡ ಕರಾವಳಿಯ ಬಂಟರಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ ಎನ್ನುವುದು ಸಂತೋಷದ ಸುದ್ದಿ.

ಬ್ರಿಟಿಷರ ಕಾಲದಿಂದಲೂ ತುಳುನಾಡಿನಲ್ಲಿ ಬಂಟರು ಸಾಮಂತ ಅರಸರಾಗಿದ್ದರು ಎಂದು ನಂಬಲಾಗಿದೆ. ಆಗಿನ ಕಾಲದಿಂದಲೂ ಕೂಡ ಬಂಟರು ಅನೇಕ ಸಂಪ್ರದಾಯ ಮತ್ತು ಆಚರಣೆಗಳನ್ನು ವಿಶಿಷ್ಟವಾಗಿ ಮತ್ತು ವೈಶಿಷ್ಟ್ಯವಾಗಿ ಆಚರಿಸಿಕೊಂಡು ಬಂದಿದ್ದಾರೆ. ಬಂಟರು ಮೂಲತಃ ಭೂತಾರಾಧನೆಯನ್ನು ಮಾಡುತ್ತಾರೆ. ಕರಾವಳಿಯ ಎಲ್ಲೆಂದರಲ್ಲಿ ಭೂತಾರಾಧನೆ ಹಾಗೂ ನಾಗಾರಾಧನೆಯನ್ನು ಕಾಣಬಹುದು. ದೈವ ಮತ್ತು ದೇವರನ್ನು ಅತ್ಯಂತ ಭಕ್ತಿ ಪೂರ್ವಕವಾಗಿ ಪೂಜಿಸುವ ಬಂಟರು ಕಲಾ ರಸಿಕರಾಗಿದ್ದಾರೆ.

– ಮುಂದುವರೆಯುವುದು

# ಸಾಮಾಜಿಕ ಜಾಲತಾಣಗಳಲ್ಲಿ ನಕಾರಾತ್ಮಕ ಚಿಂತನೆಗಳು




ಪ್ರದೀಪ ಶೆಟ್ಟಿ,
ಬೇಳೂರು

ಇಂದು ಜಾಲತಾಣಗಳ ಯುಗ, ಮನುಷ್ಯ ಜೀವಿಗಳು ಒಂದು ಕಡೆ ಸಂಬಂಧಗಳಿಂದ ಅಂತರ ಕಾಯ್ದುಕೊಳ್ಳುವುದರ ಜೊತೆಗೆ ತಮಗರಿವಿಗೆ ಬಾರದೆ ಮೊಬೈಲ್ ಎನ್ನುವ ಒಂದು ಉಪಕರಣ ಹಿಡಿದು ಅಂತರ್ಜಾಲದ ಮೂಲಕ ಜಾಲತಾಣಗಳಲ್ಲಿ ತಮ್ಮದೇ ಲೋಕವನ್ನು ಸೃಷ್ಟಿಸಿಕೊಂಡಿದ್ದಾರೆ. ಹಾಗಂತ ಈ ಜಾಲತಾಣಗಳು ನೂರಾರು ವರ್ಷಗಳಿಂದೇನು ಬಳಕೆಯಲ್ಲಿರಲಿಲ್ಲ. ಕೇವಲ ಒಂದು ದಶಕದ ಈಚೆಗೆ ತೀವ್ರಗತಿಯಲ್ಲಿ ಬೆಳವಣಿಗೆ ಕಂಡಂತಹ ಮಾಧ್ಯಮವಿದು. ಆದರೆ ಮನುಷ್ಯ ಜೀವಿಯನ್ನು ಇದು ಆವರಿಸಿಕೊಂಡಿರುವ ಪರಿ ಮಾತ್ರ ಯಾರೂ ಊಹಿಸಲು ಅಸಾಧ್ಯವಾದದ್ದು.

ಮಕ್ಕಳಿಂದ ಮುದುಕರವರೆಗೂ ಎಲ್ಲರೂ ಈ ಜಾಲತಾಣಗಳ ದಾಸರಾಗುತ್ತಿದ್ದಾರೆ. ಯಾವುದೇ ಹೊಸ ವಸ್ತುವಾಗಲಿ ಅಥವಾ ಸಂಶೋಧನೆಯಾಗಲಿ ಒಳ್ಳೆಯದು ಮತ್ತು ಕೆಟ್ಟದ್ದು ಇದ್ದೇ ಇರುತ್ತದೆ. ಎಲ್ಲದರಲ್ಲೂ ಒಳಿತು ಕೆಡುಕು ಯೋಚಿಸುವ ನಾವು ಇವುಗಳ ಬಗೆಗೆ ಚಿಂತನೆ ನಡೆಸಬೇಕಾದ ಅಗತ್ಯತೆ ಇಂದು ನಮ್ಮ ಮುಂದಿದೆ. ಈ ಜಾಲತಾಣಗಳ ಅತಿಯಾದ ಉಪಯೋಗದಿಂದ ಸಮಯ ವ್ಯರ್ಥ ಒಂದು ಕಡೆಯಾದರೆ, ಹಲವಾರು ಬಾರಿ ಅವುಗಳಿಂದ ದೊರೆಯುವ ವಿಚಾರಗಳು ಸತ್ಯಕ್ಕೆ ದೂರವಿರುತ್ತವೆ. ಸಾಮಾಜಿಕ ಜಾಲತಾಣಗಳಿಂದ ಬಹಳಷ್ಟು ಸಾರಿ ಉಪಯೋಗ ಆಗಿರುವ ಉದಾಹರಣೆಗಳು ಇವೆ. ಈ ಜಾಲತಾಣಗಳಲ್ಲಿ ಬಹುತೇಕ ಮಂದಿ ಆರೋಗ್ಯಕರ ಚರ್ಚೆ ಅಥವಾ ಸಮಾಜದ ತೊಡಕುಗಳನ್ನು ನಿವಾರಿಸುವ ಕಡೆಗೆ ವಿಚಾರಧಾರೆಗಳನ್ನು ಮಂಡಿಸುವ ಬದಲು ಬೇರೆಯವರನ್ನು ಟೀಕಿಸುವುದರಲ್ಲೇ ಕಾಲ ಕಳೆಯುತ್ತಾರೆ.

ಸಾರ್ವಜನಿಕ ಜೀವನದಲ್ಲಿ ವ್ಯಕ್ತಿಗಳು ತಪ್ಪು ದಾರಿಯಲ್ಲಿ ನಡೆದಾಗ ಟೀಕಿಸುವ ಹಕ್ಕು ಎಲ್ಲರಿಗೂ ಇದೆ, ಆದರೆ ನಾವು ಜಾಲತಾಣಗಳಲ್ಲಿ ಪ್ರತಿಕ್ರಿಯಿಸುವಾಗ ಉಪಯೋಗಿಸುವ ಪದಗಳು ಒಬ್ಬ ವ್ಯಕ್ತಿಯ ವೈಯಕ್ತಿಕ ಬದುಕಿಗೆ ಕೆಡುಕು ಉಂಟು ಮಾಡಬಾರದೆಂಬ ಪ್ರಜ್ಞೆ ನಮ್ಮಲ್ಲಿರಬೇಕು. ಕೆಲವೊಮ್ಮೆ ಯಾವ ತಪ್ಪನ್ನೂ ಮಾಡದೇ ಇದ್ದರೂ ಕೂಡ ಸಾಮಾಜಿಕ ಜೀವನದಲ್ಲಿ ಇದ್ದಾರೆ ಎನ್ನುವ ಒಂದೇ ಕಾರಣಕ್ಕೆ ಟೀಕೆಗೆ ಒಳಗಾಗುತ್ತಾರೆ. ಇಂತಹ ಚಿಕ್ಕ ಚಿಕ್ಕ ಬೆಳವಣಿಗೆಗಳು ಭವಿಷ್ಯದಲ್ಲಿ ಮಾರಕವಾಗುವ ಕಾಲ ಬಂದರೂ ಬರಬಹುದು. ಮೊಬೈಲ್ ಉಪಕರಣ ಹಿಡಿದು ಮನಸ್ಸಿಗೆ ಮೂಡುವಂತಹ ಕೀಳು ಮಟ್ಟದ ಅಭಿರುಚಿಯ ಬರಹಗಳನ್ನು ಮತ್ತೊಬ್ಬರ ಕಡೆಗೆ ಎಸೆಯುವ ವ್ಯಕ್ತಿಗಳು, ಎಂದಾದರೂ ಅದನ್ನು ಸ್ವೀಕರಿಸುವ ವ್ಯಕ್ತಿ ಮತ್ತು ಅವನ ಮನಸ್ಸಿಗೆ ಎಷ್ಟು ಘಾಸಿ ಉಂಟು ಮಾಡಬಹುದೆಂಬ ಆಲೋಚನೆ ಯಾರಾದರೂ ಮಾಡುತ್ತಾರೆಯೇ? ಒಬ್ಬ ಸಿನಿಮಾ ನಟ, ನಟಿ ಮತ್ತು ರಾಜಕೀಯ ವ್ಯಕ್ತಿಗಳು ಹಾಗೂ ಬೇರೆ ಯಾವುದೇ ಸಾರ್ವಜನಿಕ ಕ್ಷೇತ್ರದಲ್ಲಿರುವ ಸಾಧಕರು ಅವರ ಬದುಕು ಮತ್ತು ವೃತ್ತಿಯಲ್ಲಿ ಯಾವುದೋ ಕೆಟ್ಟ ನಿರ್ಧಾರದಿಂದ ಎಡವಿದಾಗ ಅವರು ಮತ್ತೆ ಎದ್ದು ನಿಲ್ಲದ ಹಾಗೆ ಮನಸ್ಸನ್ನು ಕುಗ್ಗಿಸುವ ಹಾಗೆ ಇಂದು ಹಲವಾರು ವಿಕೃತ ಮನಸ್ಸುಗಳು ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಯಾಶೀಲವಾಗಿವೆ. ಇಂತಹ ಮನಸ್ಥಿತಿಯನ್ನು ನಾವು ಮೊಳಕೆಯಲ್ಲಿರುವಾಗಲೇ ಚಿವುಟದಿದ್ದಲ್ಲಿ ಮುಂದೊಂದು ದಿನ ಹೆಮ್ಮರವಾಗಿ ಬೆಳೆದು ಇಡೀ ಮಾನವ ಕುಲವನ್ನೇ ಸುತ್ತುವರೆದರೂ ಆಶ್ಚರ್ಯವಿಲ್ಲ.

# A TRIBUTE TO SRI SRI VISHWESHA THEERTHA SWAMIJI, SRI SRI SHIVAKUMARA SWAMIJI AND SRI SRI BALAGANGADHARANATHA SWAMIJI WHO LEFT TO THEIR HEAVENLY ABODE RECENTLY



**A M Rai**

Sri Pejawar Adokshaja Matha in Udupi is one of the Ashta Mathas (8 Mathas – Religious Centres) belonging to the Dvaitha School of Hindu Theology, founded by Sri Madhvacharya, the great teacher of Dvaitha Siddhantha. Sri Sri Vishwesha Theertha Swamiji, the head of the Sri Pejawara Adokshaja Matha left for his heavenly abode on 29th December, 2019 in Pejawara Matha, Udupi, Udupi District.

He was also one of the leading lights of the Rama Janma bhoomi movement. Sri Sri Vishwesha Teertha was born as Venkataramana in a Shivalli Madhwa Brahmin family at Ramakunja, on April 27, 1931. He was ordained into sanyasa at the age of 7 by the then head of the Mutha, Vishva Manya Theertha Swami, at Chakratheertha near Hampi in 1938. A great scholar of Nyaya and Vedantha, Sri Sri Vishwesha Teertha was only the longest legend seer from the Ashta Mutts (eight mutts) of Udupi to have performed five biennial Paryayas, the biennial rituals at the Sri Krishna temple, Udupi.

Sri Sri Vishwesha Teertha came into prominence during the emergency period in 1975 when he wrote a protest letter and offered to serve a prison sentence. He was also known for his pro-Hindu programmes and was associated with the Vishwa Hindu Parishad and Sangh Parivar. He soon became one of the spearheads of the Ram Janma bhoomi movement. He was also said to be present at the disputed site during the Babri Mosque demolition on December 6, 1992 (as per report by the Indian Express, 4th February 2020).After the recent Supreme Court verdict on the Ayodhya case, the Swamiji attended a peace meeting in New Delhi and warned of an indefinite hunger strike if either the Hindu or Muslim community held victory processions or resorted to violence post the verdict.


The seer also worked for prevention of cow slaughter and was in favour of making the cow The National Animal of India. He also tried his best to prevent dalits from converting to other religions. His simplicity in life, sitting, eating and mingling with people of all walks of life and of other religion and common public has earned him unmatched reverence and respect. In 2010, he visited dalit colonies in Mysuru and offered 'Vaishnava Deeksha' (initiation into Vaishnava way of life) to Dalits. The seer was also instrumental in ending the controversial practice of "Made Snana", the practice of devotees rolling over banana leaves on which food had been served to the Brahmins. This practice is now banned in toto by the



**On Guru Purnima this July, the great seer had met Prime Minister, His highness Sri NarendraModi**

Karnataka State Government by a statute.

On Guru Purnima this July, the seer had met Prime Minister Narendra Modi in New Delhi. He also shared good relations with several top BJP leaders and other political party leaders. Senior BJP leader L K Advani, a disciple of the seer, took his blessings before starting his Ram Rath Yatra in 1990. Former Chief Minister and former Union Minister, sanyasin Uma Bharti, is a disciple of the seer, and took Deeksha from him in 1992. The Chief Minister, Sri B S Yediyurappa and almost all the top leaders from Karnataka State regarded the seer with great respect and with high esteem. On his death, the State Government has given a befitting tribute to him by arranging his funeral ceremony rituals with state honour and by declaring 3 days state mourning.



**Sri Sri Bala Gangadharanatha Swamiji – Adichunchanagiri Mathadisha seen giving dharmaopadesha to the devotees on the eve of Mulki Sundar Ram Shetty Nagar Sri Ayyappa Swamy Temple Prathistapana Mahotsava day in the august presence of Sri Sri Shiva Kumara Swamiji and Sri Sri Visheshwa Theertha Swamiji, Sri Veerendra Hegde, Sri K Sadananda Shetty and many other diginitaries on 12/07/1997.**

It is really a rare occasion when three great seers and heads of diferent mutts of different cults of Hinduism viz. Brahmins, Lingayaths, Vokkaligas and Jains gathered in single platform and blessed Sri Sri Ayyappa Temple in MSRS Nagara – Vijaya Bank Layout. Because of the blessings of these great seers, Sri Ayyappa temple at Vijaya Bank Layout, behind IIMB, Belekehally, off Bannerghatta Road, Bangalore -560076 is now self sufficient and runs on its own funds generated out of huge offerings and donations by ever increasing large number of devotees from in and around Bangalore and outside, visiting and taking blessings of Almighty God Sri Ayyappa daily.

We can definitely boast of ourselves that this is only the single largest familiar and famous largest Ayyappa temple complex built and managed by Bunts Samaja in the entire Bruhat Bangalore area, catering to the needs of large number of Ayyappa devotees without differentiating between the castes, creeds, cults, colour, rich and the poor. This temple complex has also now become a religious, spiritual and social service centre in the area.

Vijaya Bank Employees Ayyappa Seva Samithi pays heartfelt homage and tribute to these three seers – great souls - leaders of religious reformation who devoted their entire life for the well being of the people and the society at large and recently laid their physical bodies and left to their heavenly abode.

# ಕರಾವಳಿಯ ಭೂತಾರಾಧನೆ ಹಾಗೂ ನಾಗಾರಾಧನೆಗಳು



**ಸೀತಾರಾಮ ಶೆಟ್ಟಿ, ಮಾಣೂರು**

ಕರಾವಳಿಯಲ್ಲಿ ಭೂತಾರಾಧನೆ ಮತ್ತು ನಾಗಾರಾಧನೆಗಳು ಜನರ ಭಕ್ತಿ ಮತ್ತು ಸಂಪ್ರದಾಯದ ಪ್ರತೀಕವಾಗಿದೆ. ಭೂತರಾಧನೆ ಉತ್ತರದ ಕುಂದಾಪುರದಿಂದ ದಕ್ಷಿಣದ ಕಾಂಞಗಾಡ್‌ವರೆಗೂ ಪೂರ್ವದ ಚಿಕ್ಕಮಗಳೂರು ಮತ್ತು ಕೊಡಗಿನ ವರೆಗೂ ಆಚರಿಸಲ್ಪಡುತ್ತದೆ. ಕೇರಳದ ಕಣ್ಣೂರಿನ ಪರಶಿನ ಕಡವು ದೇವಾಲಯದ ಮುತ್ತಪ್ಪ ಮತ್ತು ಪೆರಿಯಪ್ಪ ದೈವಗಳೂ ಪ್ರಸಿದ್ಧಿಯನ್ನು ಪಡೆದಿವೆ. ಭೂತಗಳ ಆರಾಧನೆ ಮತ್ತು ಅವುಗಳ ಹೆಸರು ಬೇರೆ ಬೇರೆ ಇದ್ದರೂ ಸರ್ವ ಸಾಮಾನ್ಯವಾಗಿ ಅಂತಹ ವ್ಯತ್ಯಾಸವೇನೂ ಇಲ್ಲ. ಯಾವಾಗಲೂ ಭೂತಗಳು ಒಂದು ಕುಂದ ನಲ್ಪ ಭೂತ ಎನ್ನುವುದರಿಂದ ಅದನ್ನು ಮೂವತ್ತೊಂಭತ್ತು ಎಂದು ತಿಳಿದುಕೊಳ್ಳುತ್ತೇವೆ. ಭೂತಗಳಲ್ಲಿ ಗ್ರಾಮ ದೇವತೆಗಳು, ರಾಜನ್ ದೈವಗಳು, ಗುತ್ತಿನ ಮನೆ ದೈವಗಳು ಇವೆ. ಆದರೆ ಸಾಮಾನ್ಯವಾಗಿ ಕರಾವಳಿಯ ಅದರಲ್ಲೂ ಬಂಟ ಸಮುದಾಯದವರಿಗೆ 'ಪಂಜುರ್ಲಿ' ಮತ್ತು 'ಕಲ್ಲುರ್ಟಿ' ಕುಟುಂಬ ದೈವಗಳಾದರೆ ಜುಮಾದಿ ಬಂಟಗಳು ಗ್ರಾಮ ದೈವಗಳಾದರೂ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರಿನಿಂದ ಆಚರಿಸಲ್ಪಡುತ್ತವೆ. ಭೂತಕ್ಕೆ ಒಂದು ಮಾಡ ಅಥವಾ ಸ್ಥಾನ ಇರುತ್ತದೆ. ಇಲ್ಲದಿದ್ದರೆ ಗುತ್ತಿನ ಮನೆಯ ಒಂದು ಕೋಣೆಯಲ್ಲಿ ಭೂತಕ್ಕೆ ಸಂಬಂಧಪಟ್ಟ ಮುಗ, ಮೂರ್ತಿ, ಕಡ್‌ತಲೆ, ಚೌರಿ, ಬಿಲ್ಲು ಬಾಣ, ಆಭರಣ, ಅಣೆಗೆ ಅಲಂಕಾರ ಮಾಡುವ ಬೆಳ್ಳಿ ಬಂಗಾರಗಳು ಇರುತ್ತವೆ. ಭೂತ ನೇಮವು ಕೆಲವು ಜಾಗದಲ್ಲಿ ವರ್ಷದ ಇಂತಹ ದಿನದಂದು ಎಂದು ತೀರ್ಮಾನವಾಗಿದ್ದರು ಅಥವಾ ಬೇರೆ ದಿನದಲ್ಲಿ ಆಚರಣೆ ಮಾಡುವುದಿದ್ದರೂ 'ಭೂತಕ್ಕೆ' ಕುಧಿ ಆತ್‌ಂಡ್, ಕೈಲ್ ಕಡ್‌ತ್ತ್‌ಂಡ್ ಎನ್ನುತ್ತಾರೆ. ಈ ಎಂಟು ದಿವಸದ ಕುದಿ ಆದ ಮೇಲೆ ಗ್ರಾಮದಲ್ಲಿ ಯಾವುದೇ ಶುಭ ಕಾರ್ಯ ಜರಗುವ ಹಾಗಿಲ್ಲ. ರಾಜನ್ ದೈವಗಳಾದ ಜುಮಾದಿ ಬಂಟ, ರಕ್ತೇಶ್ವರಿ, ವ್ಯಾಘ್ರ ಚಾಮುಂಡಿ, ಮೈಸಾನ್‌ದಾಯ ಇತ್ಯಾದಿ ದೈವಗಳಿವೆ 'ನೇಮ' ಎಂದೂ ಮನೆಯಲ್ಲಿ ಕುಟುಂಬದ ಭೂತಾರಾಧನೆಯನ್ನು ಕೋಲ ಎಂದು ಕರೆಯುತ್ತಾರೆ. ಕೋಲವನ್ನು ಯಾವಾಗ ಯಾರು ಬೇಕಾದರೂ ನಡೆಸಬಹುದು ಆದರೆ ನೇಮವನ್ನು ಗಡ್‌ಪಾಡಿ ಜಾಗದಲ್ಲಿ ಮಾತ್ರ ಸಂಪ್ರದಾಯ ಬದ್ಧವಾಗಿ ನಡೆಸಬೇಕಾಗುತ್ತದೆ.

ನೇಮ ನಡೆಯುವುದು ಕೈಲ್ (ಬಾಳೆಗೊನೆ) ಕಡ್‌ತ್ತಿನ ಎಂಟು ದಿನದಲ್ಲಿ ವಾಡಿಕೆ. ನೇಮ ನಡೆಯಬೇಕಾದರೆ ಬಂಟ ಸಮುದಾಯಕ್ಕೆ ಸೇರಿದ ಗುತ್ತಿನ ಮನೆಯ ಗತ್ತಿನ ಬಂಟನು ಅದರ ಗುರಿಕಾರನಾಗಿರುತ್ತಾನೆ. ಅವನ ಆದೇಶದ ಹಾಗೆ ಆರಾಧನೆ ನಡೆಯಬೇಕು. ಭೂತಕ್ಕೆ ಮತ್ತು ಗುರಿಕಾರನಿಗೆ ಅವಿನಾಭಾವ ಸಂಬಂಧ ಇದೆ. ಒಂದು ವೇಳೆ ಯಾವುದೇ ಲೋಪಗಳಾಗಿ ಭೂತ ನರ್ತನವು ವಿಪರೀತಕ್ಕೆ ಹೋದರೆ "ಶಾಲು ಹೊದ್ದ ಗುರಿಕಾರ" ಎದ್ದು ಕೈ ಮುಗಿದು "ದಾನೆನಾ ತೆರಿದಾ ತೆರಿಯಾಂದೆನ ತಪ್ಪು ಬತ್ತುದುಪ್ಪು ಅಯೆನ್ ಬುಡು ಪತ್ತ್‌ದ ನೋಮಾನು ಸಂತೋಷೊಡು ಸ್ವೀಕರಿಸದ್ ಎಂಕಲೆಗ್ ಎಡ್ಡೆ ಅನು ಕೊರೊಡು" ಎಂದ ತಕ್ಷಣ ಉಗ್ರ ಅವತಾರದಲ್ಲಿದ್ದ ದೈವವು "ಸಂತೋಷಾಂಡ್ ನಂಬೊನ್‌ಲೆ ಎಂದು ನುಡಿಗಟ್ಟು ಕೊಡುತ್ತದೆ. ಭೂತ ನೇಮದ ಹಿಂದಿನ ದಿನ ಭೂತದ ತಾಣದಿಂದ ಬ್ಯಾಂಡ್ ವಾದ್ಯಗಳ ನಾದದೊಂದಿಗೆ ಬಂಡಾರ ಬರುವುದಿದೆ. ಅದರಲ್ಲಿ ಗುರಿಕಾರ ಹಾಗೂ ಬಂಟರ ಸಮುದಾಯಕ್ಕೆ ಸೇರಿದ 'ಬಳೆ' ಇಟ್ಟ ಭೂತದ ಮಾಣಿ (ಮುಕ್ಕಾಲ್ದಿ) ಮತ್ತು ಪೂಜಾರಿ ಹಾಗೂ ಮಡಿವಾಳ (ಮುಗ ಹಿಡಿದು ದರ್ಶನ ಬರುವುದು) ಮತ್ತು ಊರ ಸಮಸ್ತರು ಸೇರಿ ಗಡುಪಾಡಿ ಜಾಗಕ್ಕೆ ಬಂದು "ಬಂಡಾರ ಏರುವುದು" ಎನ್ನುವುದಿದೆ. ಆ ಜಾಗಕ್ಕೆ ಕೊಡಿ ಅಡಿ ಅನ್ನುತ್ತಾರೆ. ಅಲ್ಲಿ ಒಂದು ಅಲಂಕಾರಿಕ ಶಾಸ್ತ್ರ ಬದ್ಧವಾದ ಚಪ್ಪರವನ್ನು ಹಾಕಿರುತ್ತಾರೆ. ಭೂತ ಕೋಲದ ಪ್ರಾರಂಭದಲ್ಲಿ ಭೂತ ಕಟ್ಟುವ ನಲಿಕೆಯವರು, ಪಂಬದರು, ಪರವರು, ಮಲವರು (ಮಲೆಯಾಳಂ) ಮನೆ ಮಾತಿನವರು ಯಾರೇ ಆಗಲಿ ಅವರಿಗೆ ಎಣ್ಣೆ ಕೊಡುತ್ತಾರೆ. ಆಗ ಅವರಿಗೆ ಮೈಮೇಲೆ ಭೂತ ಅವಗಾಹನೆಯಾಗಿ ಶಾಸ್ತ್ರ ಬದ್ಧವಾದ ನರ್ತನ ನಡೆಯುವುದು. ಇದಾದ ತಕ್ಷಣ ಗಗ್ಗರ ದೊಚ್ಚಿ ಎನ್ನುವ ನರ್ತನ ಇದೆ. ಅದಾದ ಅಲ್ಪ ವಿರಾಮದ ಮೇಲೆ ಅಣಿ ಹಾಕುವುದಕ್ಕೆ ಪಾತ್ರದಾರಿಯನ್ನು ಕೊಡಿ ಅಡಿಯಲ್ಲಿ ನಿಲ್ಲಿಸುತ್ತಾರೆ. ಆಗ ಅಲ್ಲಿ ಜೋಡಿಸಿರುವ ಭೂತದ ನರ್ತನಕ್ಕೆ ಸಂಬಂಧ ಪಟ್ಟ ಗಂಟೆ ಕಡತ್ತಲೆ, ಚೌರಿ ಯಾ ತ್ರಿಶೂಲ

ಇದನ್ನು ಭೂತದ ಮಾಣಿ ಕೊಡುವುದು ವಾಡಿಕೆ. ಆಗ ಅವನ ಮೈಮೇಲೆ ಆವೇಶ ಬಂದು ಒಂದು ಸಂಪ್ರದಾಯ ಬದ್ಧವಾದ ದರ್ಶನವಿದೆ. ಅಷ್ಟರಲ್ಲಿ ಪಾತ್ರಿಯ ಕಡೆಯವರು ಪಾಡ್ದನ (ಪ್ರಾರ್ದನ) ಹಾಡುವಾಗ ಭೂತಕ್ಕೆ ನರ್ತನ ಶುರುವಾಗುತ್ತದೆ. ವಾದ್ಯಘೋಷಗಳು ಮುಗಿಲು ಮುಟ್ಟುತ್ತದೆ. ನರ್ತನ ಪರಾಕಷ್ಟಕ್ಕೆ ಹೋಗುತ್ತದೆ. ಭಕ್ತರು ಕಣ್ಣು ಮುಚ್ಚದೆ ಭಕ್ತಿಯಿಂದ ತನ್ಮಯರಾಗುತ್ತಾರೆ. ಆದಾದ ಸ್ವಲ್ಪ ಸಮಯದ ಮೇಲೆ ಮುಗ ಇಡುವ ಪದ್ಧತಿ. ಆಗ ಮಡಿವಾಳ ಅಥವಾ ದೈವದ ಪೂಜಾರಿ ಸಾಲಾಗಿ ಜೋಡಿಸಿರುವ ವಸ್ತುಗಳಿಂದ ಭೂತದ ಲೋಹದ ಮೊಗವನ್ನು ತೆಗೆದು ಭೂತದ ಮುಂದೆ ದರ್ಶನ, ನರ್ತನ ಮಾಡಿ ಮುಗವನ್ನು ಭೂತಕ್ಕೆ ಒಪ್ಪಿಸುತ್ತಾರೆ. ಮುಗ ಕಟ್ಟಿದ ಭೂತ ನರ್ತನ ಮಾಡಿ 'ವಾಲಸರಿ' ಅಥವಾ ಬಲಿ ಬರುವುದು ಇದೆ. ಇದು ಪ್ರಾದೇಶಿಕವಾಗಿ ಬೇರೆ ಬೇರೆ ರೀತಿ ಇರುತ್ತದೆ. ಆಮೇಲೆ ನರ್ತನ, ಅವಹಾಲು, ಅರಿಕೆ ಮತ್ತು ನ್ಯಾಯ ತೀರ್ಮಾನ ಆದ ಮೇಲೆ ಬೂಲ್ಯ ತೆಗೆದು ಅಂದಿನ ಆರಾಧನೆ ಅಲ್ಲಿಗೆ ಮುಗಿಯುತ್ತದೆ. ಭೂತಾರಾಧನೆಯ ಮಧ್ಯೆ ಆವಾರ ತೆಗೆಯುವುದು ಇದೆ. ಆವಾರ (ಆಹಾರ) ಪೊರಿ ಬಾಳೆಹಣ್ಣು ಎಳನೀರು ಕೊಡುವುದಿದ್ದರೆ ಇನ್ನು ಕೆಲವು ಭೂತಗಳಿಗೆ ಕೋಳಿ ಬಲಿ ಕೊಡುವುದು ಇದೆ. ಇಷ್ಟೆಲ್ಲಾ ಕಾರ್ಯಕ್ರಮಗಳು ನಡೆಯುವುದು ಬಂಟ ಸಮುದಾಯಕ್ಕೆ ಸೇರಿದ ಗುತ್ತಿನ ಮನೆಯಲ್ಲಿ ಅಥವಾ ಗುತ್ತಿಗೆ ಸೇರಿದ ಗುಡಿ (ಸ್ಥಾನ)ಯಲ್ಲಿ ಅಥವಾ 'ಗಡುಪಾಡಿ' ಜಾಗದಲ್ಲಿ. ಇದರ ಮುಂದಾಳತ್ವ ಬಂಟ ಗುರಿಕಾರನಿಗೆ ಸೇರಿದೆ ಎಂದರೆ ತಪ್ಪಾಗಲಾರದು. ಕೆಲವು ಭೂತಾರಾಧನೆಗಳು ಬಂಟರ ಗುತ್ತಿನ ಮನೆಯ ಖರ್ಚಿನಲ್ಲೇ ನಡೆಯುತ್ತದೆ. ಹೀಗೆ ಸಾರ್ವಜನಿಕ ಭೂತಾರಾಧನೆಯ ಸ್ಥಳ, ಉಸ್ತುವಾರಿ ಇಂದಿಗೂ ಬಂಟ ಸಮುದಾಯದಲ್ಲೇ ಇದೆ ಎನ್ನುವುದು ಹೆಮ್ಮೆ ಪಡುವ ವಿಚಾರವೇ ಆಗಿರುತ್ತದೆ. ಭೂತಾರಾಧನೆಯ ಸಂದರ್ಭದಲ್ಲಿ ಪರವೂರಿನಲ್ಲಿರುವ ಸಂಬಂಧಿಕರೆಲ್ಲರೂ ಕುಟುಂಬ ಸಮೇತರಾಗಿ ಊರಿಗೆ ಬರುವುದರಿಂದ ಹಬ್ಬದ ಮೆರಗು ಬಂದು ಸಂತೋಷವಾಗಿ ಕಾಲ ಕಳೆಯುತ್ತಾ ಸಂಬಂಧಿಕರನ್ನು ಸ್ನೇಹಿತರನ್ನು ಭೇಟಿ ಮಾಡುವುದಕ್ಕೂ ಒಂದು ಅವಕಾಶ ಒದಗಿ ಬರುತ್ತದೆ.


# *New Flats For Sale*

**In Mangalore near Airport, Kavoor Junction**
**6 New flats are for sale around 1500 sq.ft. each.**

**Also in Mangalore, Lady Hill,**
**Duplex Flat 3700 sq. ft. area for Sale or Rent.**

If interested please contact
**Mrs Usha Shetty - Mobile: 09945 372491**
**or**
**Mr Jagannath Bhandary - Mobile: 93246 19871 / 88064 67677**
**Email : cosmicvjb@hotmail.com**

ADVT.

# ಮಾಜಿ ಸಚಿವ ಮುಂಡ್ರುದೆಗುತ್ತು ಕೆ. ಅಮರನಾಥ ಶೆಟ್ಟಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಸಜ್ಜನ ರಾಜಕಾರಣಿ, ಮಾಜಿ ಸಚಿವ ಕೆ. ಅಮರನಾಥ ಶೆಟ್ಟಿಯವರು ದಿನಾಂಕ 22.04.1940 ರಂದು ಕೊಡ್ಮನ್‌ಗುತ್ತು ದಿ. ಕಾಂತಪ್ಪ ಶೆಟ್ಟಿ ಮತ್ತು ಮುಂಡ್ರುದೆಗುತ್ತು ದಿ. ರತ್ನಾವತಿ ಶೆಟ್ಟಿ ದಂಪತಿಗಳ ಪುತ್ರರಾಗಿ ಜನಿಸಿದರು. ಚಿಕ್ಕಂದಿನಿಂದಲೇ ನಾಯಕತ್ವ ಗುಣ ಬೆಳೆಸಿಕೊಂಡು ಹುಟ್ಟು ಕೃಷಿಕರಾಗಿ, ಗ್ರಾಮೀಣ ಮಟ್ಟದಿಂದ ಪಾಲಡ್ಕ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ, ಕಾರ್ಕಳ ತಾಲೂಕು ಬೋರ್ಡ್ ಸದಸ್ಯರಾಗಿ, ಮೂಡಬಿದಿರೆ ಪುರಸಭೆಯ ಮೊದಲ ಚುನಾಯಿತ ಅಧ್ಯಕ್ಷರಾಗಿ, ಆಧುನಿಕ ಮೂಡಬಿದಿರೆಯ ಸಮಗ್ರ ಅಭಿವೃದ್ಧಿಯಲ್ಲಿ ಅವರ ಸೇವೆ ಅಜರಾಮರ.

1983ರಲ್ಲಿ ಮೂಡಬಿದಿರೆ ಮುಲ್ಕಿ ಕ್ಷೇತ್ರದ ಜನತಾ ಪಕ್ಷದಿಂದ ವಿಧಾನ ಸಭೆಗೆ ಸ್ಪರ್ಧಿಸಿ, ಜಯಗಳಿಸಿ ಶಾಸಕರಾಗಿ ವಿಧಾನ ಸಭೆಗೆ ಪ್ರವೇಶಿಸಿದರು. ಮೂರು ಅವಧಿಗೆ ಶಾಸಕರಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದರು. 1984ರಲ್ಲಿ ರಾಮಕೃಷ್ಣ ಹೆಗ್ಡೆಯವರ ಸಚಿವ ಸಂಪುಟದಲ್ಲಿ ಪ್ರವಾಸೋದ್ಯಮ ಮತ್ತು ಧಾರ್ಮಿಕ ದತ್ತಿ ಸಚಿವರಾಗಿ, 1987ರಲ್ಲಿ ಪುನಃ ಧಾರ್ಮಿಕ ದತ್ತಿ ಸಚಿವರಾಗಿ, 1988ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ, ಮೀನುಗಾರಿಕೆ, ಬಂದರು ಅಭಿವೃದ್ಧಿ, ಕ್ರೀಡೆ, ಯುವಜನ ಸೇವೆ ಸಚಿವರಾಗಿ ಹಾಗೂ 1999ರಲ್ಲಿ ಜೆ.ಎಚ್. ಪಟೇಲ್ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾದ ಸಮಯದಲ್ಲಿ ದಕ್ಷಿಣ ಕನ್ನಡ, ಉಡುಪಿ ಪ್ರತ್ಯೇಕ ಜಿಲ್ಲೆಗಳಾಗಿ ಬೇರ್ಪಟ್ಟಾಗ ಮೂಡಬಿದಿರೆ, ಕಾರ್ಕಳ ತಾಲೂಕಿನ ವಿಭಾಗವಾಗಿತ್ತು. ಆಗ ಅವರ ಪ್ರಯತ್ನದಿಂದ ಮೂಡಬಿದಿರೆ ವಿಭಾಗವನ್ನು ಮಂಗಳೂರು ತಾಲೂಕಿನಲ್ಲಿ ಉಳಿಸಲು ಹೋರಾಟ ಮಾಡಿ, ಈಗ ಮೂಡಬಿದಿರೆ ಪ್ರತ್ಯೇಕ ತಾಲೂಕು ಆಗಲು ಶೆಟ್ಟರು ಪ್ರಯತ್ನ ಪಟ್ಟಿರುವರು.

ರಾಜಕೀಯ ಮಾತ್ರವಲ್ಲದೆ ಶಿಕ್ಷಣ, ಧಾರ್ಮಿಕ, ಸಾಮಾಜಿಕ ಮತ್ತು ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯರಾದ ಅವರು ಮೂಡಬಿದಿರೆ ರೋಟರಿ ಸಂಸ್ಥೆ ಅಧ್ಯಕ್ಷರಾಗಿ, ರೋಟರಿ ಶಿಕ್ಷಣ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿ, ರೋಟರಿ ಆಂಗ್ಲ ಸಂಸ್ಥೆಯನ್ನು ಮುನ್ನಡೆಸಿದರು. ಆಳ್ವಾಸ್ ಶಿಕ್ಷಣ ಸಂಸ್ಥೆಯ ಸ್ಥಾಪಕ ಟ್ರಸ್ಟಿಯಾಗಿ ಅದರ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದ್ದರು.

ಸಹಕಾರಿ ಕ್ಷೇತ್ರದಲ್ಲಿ ಅಮರನಾಥ ಶೆಟ್ಟಿಯವರ ಕೊಡುಗೆ ಅಪಾರ. ಕಡಂದಲೆ ಹಾಲು ಸೊಸೈಟಿಯ ಅಧ್ಯಕ್ಷರಾದಲ್ಲಿಂದ ತೊಡಗಿ ತಾಲೂಕು ಭೂ ಅಭಿವೃದ್ಧಿ ಬ್ಯಾಂಕ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕ್ಯಾಂಪ್ಕೋ, ದಕ್ಷಿಣ ಕನ್ನಡ ಜಿಲ್ಲಾ ಡಿ.ಸಿ.ಸಿ ಬ್ಯಾಂಕ್, ರಾಜ್ಯ ಅಪೆಕ್ಸ್ ಬ್ಯಾಂಕ್, ಜಿಲ್ಲಾ ತೆಂಗು ಅಡಿಕೆ ಬೆಳೆಗಾರರ ಸಂಘ ಇವುಗಳ ನಿರ್ದೇಶಕ / ಆಡಳಿತ ಸಮಿತಿ ಸದಸ್ಯರಾಗುವ ಮೂಲಕ ಸಹಕಾರಿ ರಂಗದಲ್ಲಿ ಸೇವೆ ಸಲ್ಲಿಸಿರುವರು. ಮೂಡಬಿದ್ರೆಯ ಸೊಸೈಟಿ (ಎಂಸಿಎಸ್) ಬ್ಯಾಂಕ್‌ನಲ್ಲಿ ನಿರ್ದೇಶಕರಾಗಿ ಸುವರ್ಣ ಸಂಭ್ರಮ ಅಧ್ಯಕ್ಷರಾಗಿ 30 ವರ್ಷ ಸೇವೆ. ಸುಮಾರು 350 ಕೋಟಿಗೂ ಅಧಿಕ ವ್ಯವಹಾರ ನಡೆಸುವ ಸಾಮರ್ಥ್ಯ ತೋರುವ ಮೂಲಕ ವಾಣಿಜ್ಯ ಬ್ಯಾಂಕುಗಳನ್ನು ಮೀರಿಸುವ ದಾಖಲೆ. ರಾಜ್ಯ ಸಹಕಾರ ಮಹಾ ಮಂಡಳದಿಂದ ಸಹಕಾರ ರತ್ನ ಪ್ರಶಸ್ತಿಯ ಗರಿ.

ಅಲ್ಲದೇ ಸಾಮಾಜಿಕ ಕ್ಷೇತ್ರದಲ್ಲಿ ಅಮರನಾಥ ಶೆಟ್ಟಿಯವರು ಅನೇಕ ಬ್ರಹ್ಮಕಲಶಾಭಿಷೇಕ, ನಾಗಮಂಡಲಾದಿ ಧಾರ್ಮಿಕ ಉತ್ಸವ, ಸಾರ್ವಜನಿಕ ಗಣೇಶೋತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೇವಸ್ಥಾನಗಳ ಅಭಿವೃದ್ಧಿಯಲ್ಲಿ ತನ್ನ ಕೊಡುಗೆಯನ್ನು ನೀಡಿರುವರು.

ಸಮಾಜ ಮಂದಿರ, ದಸರಾ ಮಹೋತ್ಸವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಆಳ್ವಾಸ್ ನುಡಿಸಿರಿ ಹೀಗೆ ಹತ್ತಾರು ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ರೂವಾರಿಯಾಗಿದ್ದರು.

ತಮ್ಮ ಸಮುದಾಯದ ಸೇವೆಯಲ್ಲಿ ಬಂಟರ ಮಾತೃ ಸಂಘದ ಅಧ್ಯಕ್ಷರಾಗಿ, ಮೂಡಬಿದಿರೆ ವಲಯ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು.

ಕಳೆದ 27.01.2020 ರಂದು ತಮ್ಮ 80ನೇ ವಯಸ್ಸಿನಲ್ಲಿ ಶ್ರೀಯುತ ಅಮರನಾಥ ಶೆಟ್ಟಿಯವರು ನಿಧನರಾಗಿರುವರು. "ಅಳಿಯುವುದು ಕಾಯ, ಉಳಿಯುವುದು ಕೀರ್ತಿ" ಎಂಬಂತೆ ಸಮಾಜದ ಪ್ರತಿಯೊಬ್ಬರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ ಇವರು ತಮ್ಮ ಪತ್ನಿ ಶ್ರೀಮತಿ ಜಯಶ್ರೀ ಶೆಟ್ಟಿ, ಇಬ್ಬರು ಪುತ್ರಿಯರು, ಸಹೋದರರು, ಸಹೋದರಿಯರು, ಅನೇಕ ಅಭಿಮಾನಿಗಳು, ಸ್ನೇಹಿತರನ್ನು ಅಗಲಿರುವರು. ಅಗಲಿದ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ ಹಾಗೂ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ಅವರ ಆದರ್ಶ ಜೀವನ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ ಎಂದು ಹಾರೈಸುತ್ತೇನೆ.

**ಎನ್. ಸತ್ಯಾನಂದ ಮೇಲಾಂಟ**

# ಮೈಸೂರು ಬಂಟರ ಸಂಘ – ವಾರ್ಷಿಕ ಕ್ರೀಡಾ ಕೂಟ



ದಿನಾಂಕ 11.01.2020ರಂದು ಬಂಟರ ಸಂಘ ಮೈಸೂರಿನ ವಾರ್ಷಿಕ ಕ್ರೀಡೋತ್ಸವದ ಉದ್ಘಾಟನೆಗೆ ಸಂಘದ ಅಧ್ಯಕ್ಷರಾದ ಶ್ರೀ ತೊಂಭತ್ತು ಪ್ರಭಾಕರ ಶೆಟ್ಟಿಯವರು ವಿದ್ಯುಕ್ತವಾಗಿ ಚಾಲನೆ ನೀಡಿದರು.

ಈ ಕ್ರೀಡಾಕೂಟದಲ್ಲಿ ಪುರುಷರಿಗಾಗಿ, ಮಹಿಳೆಯರಿಗಾಗಿ ಮತ್ತು ಮಕ್ಕಳಿಗಾಗಿ ನಡೆದ ಕ್ರೀಡೆಗಳು ಬಂಟ ಬಾಂಧವರಲ್ಲಿ ನವಚೈತನ್ಯ ಹುಮ್ಮಸ್ಸಿನೊಂದಿಗೆ ಮನೋರಂಜನೆಯ ಹೊಸ ಲೋಕವನ್ನೇ ಸೃಷ್ಟಿಸಿತು. ಈ ಕ್ರೀಡಾಕೂಟದಲ್ಲಿ ಆಡಳಿತ ಮಂಡಳಿಯ ಪದಾಧಿಕಾರಿಗಳು, ಸದಸ್ಯರು ಮತ್ತು ಕ್ರೀಡಾ ಸಮಿತಿಯ ಸದಸ್ಯರುಗಳು ಈ ಕ್ರೀಡೋತ್ಸವದ ಯಶಸ್ವಿಗೆ ಕಾರಣರಾದರು.

ವಿವಿಧ ಕ್ರೀಡೆಗಳಲ್ಲಿ ಜಯಗಳಿಸಿದ ಕ್ರೀಡಾಪಟುಗಳಿಗೆ ಸಂಘದ ಅಧ್ಯಕ್ಷರು ಬಹುಮಾನ ವಿತರಿಸಿ ಪ್ರೋತ್ಸಾಹಿಸಿದರು.

**Bunts' Sangha RNS Vidyaniketan II**
Yalachaguppe, Tavarekare, Bangalore.




**Admission Open**
**Montessori / LKG / UKG / Std 1**
**CBSE**
**for the year 2020-2021**

An Institution with over 27 years in the field of education is venturing into a new, spacious state-of-the-art campus @ Yelachaguppe

**Contact : 080-2339 8922 | 2339 3610**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
(A Charitable Institution)

60 YEARS 1958 - 2018



# BISU(UGADI) Celebration

# ಬಿಸು (ಯುಗಾದಿ) ಆಚರಣೆ

**ಏಪ್ರಿಲ್ 14, 2020 ಮಂಗಳವಾರ**

ಚಿ ಅ ಪಿ ಅ

ಚಿಣ್ಣರ ಸೌಂದರ್ಯ ಸ್ಪರ್ಧೆ
for the kids 5-10 years
Bunts Kids only

ವಿವಿಧ ತಂಡಗಳಿಂದ
## ನೃತ್ಯ ಕಾರ್ಯಕ್ರಮ

ಗುರುಪುರ ಬಂಟರ ಮಾತೃ ಸಂಘದಲ್ಲಿ ಜರುಗಿದ 'ಬಂಟ ಕಲಾವೀಲ್ಯ'-
ಅಂತರ್ ಬಂಟರಸಂಘ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ
